Sri VEERENDRA PATIL (Minister for Public Works).—Sir, I beg to introduce the Mysore Highways Bill, 1963.

Mr. SPEAKER.—The Mysore Highways Bill, 1963 is introduced.

Sri KONDAJJI BASAPPA (Deputy Minister for Co-operation).—I beg to introduce the Bombay Agricultural Produce Markets (Mysore Amendment) Bill, 1963.

Mr. SPEAKER.—The Bombay Agricultural Produce Markets (Mysore Amendment) Bill, 1963 is introduced.

MYSORE IRRIGATION BILL, 1963.

Motion to consider—(debate contd.)

ಶ್ರೀ ನಂಜೀವನಾಥ ಐಕಳ (ಸುರತ್ಕಲ್).—ಮಾನ್ಯ ಅಧ್ಯಕ್ಷರೆ, 1957ನೆಯ ಇಸವಿಯಲ್ಲಿ ತರಬೇಕಾದ ಬಿಲ್ಲನ್ನು 1963ನೆಯ ಇಸವಿಯಲ್ಲಿ ತಂದಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಇದು ಈಗ ಇರುವ ಪರಿಸ್ಥಿತಿಗನುಗುಣವಾಗಿದೆಯೆ ಎಂದರೆ ಇಂಗ್ಲೀಷಿನಲ್ಲಿರುವ 'ಓಲ್ಡ್ ವೈನ್ ಇನ್ ನ್ಯೂ ಬಾಟಲ್' ಎಂಬ ಗಾದೆಯಂತೆ ಇದೆ, ಹಳೆಯ ವಿಧೇಯಕವನ್ನು 1963ನೆಯ ಇಸವಿಯ ವಿಧೇಯಕ ಎಂದು ಬದಲಾವಣೆ ಮಾಡಿ ತಂದಿದ್ದಾರೆ. ಇದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟ ಯಾವ ಇರಿಗೇಷನ್ ಕೆಲಸಗಳ ಅನುಭವ ಇದರಲ್ಲಿ ಕಾಣುವುದಿಲ್ಲ. ಮುಖ್ಯವಾಗಿ ಅಲ್ಲಿ ಈಗ ಮಾಡಬೇಕಾದ ಸಾಲ್ಟ್‌ವಾಟರ್ ಎಕ್ಸ್‌ಕ್ಲೂಷನ್ ಡ್ಯಾಮ್ಸ್ ಮತ್ತು ಪಂಜೆಡ್ ಡ್ಯಾಮ್ಸ್‌ಗಳ ಉಲ್ಲೇಖ ವಿಧೇಯಕದಲ್ಲಿ ಎಲ್ಲೂ ಕಾಣುವುದಿಲ್ಲ; ಡೆಫೆನಿಷನ್ನಿನಲ್ಲೂ ಕಾಣುವುದಿಲ್ಲ. ಆದುದರಿಂದ ಉಪ್ಪು ನೀರನ್ನು ತಡೆಯುವ ನೀರಾವರಿ ಯೋಜನೆಗಳನ್ನು ಇದರಲ್ಲಿ ಸೇರಿಸುವ ಅಗತ್ಯವಿದೆ. ಅಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಸೇತುವೆ ಕಟ್ಟುವ ಕೆಲಸ ಕೆಲವು ಕಡೆ ನಡೆದಿದೆ. ಅದರ ಉಲ್ಲೇಖ ಕೂಡ ಇದರಲ್ಲಿ ಕಾಣುವುದಿಲ್ಲ. ಆದುದರಿಂದ ಈ ಮಸೂದೆಯ ಸೆಕ್ಷನ್ನಿನಲ್ಲಿ ರೋಡ್ ಕಂ ಬ್ರಿಡ್ಜ್ ಕಂ ವೆಂಜೆಡ್ ಡ್ಯಾಂ ಸೇರಿಸುವ ಅಗತ್ಯವಿದೆ. ಅದನ್ನು ಕೆಲವು ತಿದ್ದುಪಡಿಗಳನ್ನು ತರುವಾಗ ನೂಟಿಸುತ್ತೇನೆ. ಇನ್ನೊಂದು ಮುಖ್ಯವಾದ ವಿಷಯ ಇದರಲ್ಲಿ ಕಾಣುವುದಿಲ್ಲ. ಕೆಲವು ಕಡೆ ನದಿಗಳಲ್ಲಿ, ನಾಲೆಗಳಲ್ಲಿ, ಕೆರೆಗಳಲ್ಲಿ ಹೂಳು ತುಂಬಿ ಅನೇಕ ಕಡೆ ಅವು ಉಪಯೋಗಕ್ಕೆ ಬಾರದಹೋಗಿವೆ. ಆ ವಿಷಯದ ಉಲ್ಲೇಖವೂ ಇಲ್ಲ. ಡೀಸಿಲ್ಟಿಂಗ್ ಕೆಲಸವನ್ನು ಈ ವಿಧೇಯಕದಲ್ಲಿ ಅಳವಡಿಸಿದಂತೆ ಕಾಣುವುದಿಲ್ಲ. ಇದನ್ನು ಸೇರಿಸಬೇಕಾದ್ದು ಅಗತ್ಯ.

ನನಗೆ ಮುಂಚೆ ಮಾತನಾಡಿದವರು ಹೇಳಿರುವ ಕೆಲವು ವಿಚಾರಗಳನ್ನು ಮತ್ತೆ ನಾನೂ ಹೇಳಬೇಕಾಗಿದೆ. ನೀರಾವರಿ ಪ್ರದೇಶದಲ್ಲಿ ಹಾಕುತ್ತಿರುವ ಹೆಚ್ಚು ಕರಭಾರಕ್ಕೆ ಅದು ಸಂಬಂಧಪಟ್ಟಿದೆ. ಆ ಪ್ರದೇಶದವರು ಸರ್ಕಾರಕ್ಕೆ ಮೂರು ನಮೂನೆ ತೆರಿಗೆಯನ್ನು ಕೊಡಬೇಕು. ಕೆಲವು ಕಡೆ ಪಂಚಾಯಿತಿ ಸಹ ಕರಭಾರವನ್ನು ಹೊರಿಸಿದೆ. ಅದರ ಮೇಲೆ ಈಗ ಒಂದು ವರ್ಷದಿಂದ ಸೆಂಟ್ ಪರ್ಸೆಂಟ್ ಸರ್‌ಛಾರ್ಜ್ ಇದೆ. ಅದು ಕೆಲವು ವರ್ಷ ಮುಂದುವರೆಯಬಹುದು. ಆದರ ನಂತರ ಹೊಸ ರೀ ಸೆಟ್ಲ್‌ಮೆಂಟ್ ಆದಮೇಲೆ ಮಾನ್ಯ ಕಂದಾಯ ಮಂತ್ರಿಗಳು ಹೆದರಿಸಿರುವ ಹಾಗೆ ಮೂರು ನಾಲ್ಕು ಪಾಲು ತೆರಿಗೆ ಹೆಚ್ಚಬಹುದು. ಈ ಸಂಬಂಧದಲ್ಲಿ ಎರಡು ಮೂರು ಸಲ ಎಚ್ಚರಿಕೆ ಕೊಟ್ಟಿದ್ದಾರೆ. ಈಗಿರುವ 5 ರೂಪಾಯಿ ನೀರು ತೆರಿಗೆ, ಪೆಸ್ಟಿಟನೆನ್ಸ್ ಕಾಸ್ಟ್ ಎಂಬ ಹೆಡ್‌ನಲ್ಲಿ ಹಾಕಿರುವ ತೆರಿಗೆ ಎರಡಾ ಸೇರಿ ಬಹಳ ಹೊರೆಯಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಮೂರು ಬೆಳೆ ತೆಗೆಯುತ್ತಾರೆ. ಅವರಿಗೆ ತುಂಬಾ ಅನ್ಯಾಯವಾಗುತ್ತದೆ. ಹಾಗಾಗದಂತೆ ನೋಡಿಕೊಳ್ಳಬೇಕೆಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ

ನಮ್ಮ ಜಿಲ್ಲೆ ಒಂದು ಮೂಲೆಯಾಯಿತು. ಅಲ್ಲಿ ನೀರನ್ನು ತೆಗೆದುಕೊಳ್ಳಲು ಸಣ್ಣ ಕಟ್ಟೆ ಹಾಕುವುದು ಮುಂತಾದ ಕೆಲಸಗಳನ್ನು ರೈತರೇ ಸ್ವಂತವಾಗಿ ಮಾಡಿಕೊಳ್ಳುತ್ತಿದ್ದಾರೆ. ಅವುಗಳ ಬಗ್ಗೆ ಬಹಳ ಖರ್ಚುಮಾಡುತ್ತಿದ್ದಾರೆ. ಹಾಗೆ ಖರ್ಚು ಮಾಡಿ ಅನುಕೂಲಪಡಿಸಿಕೊಂಡಿರುವವರಿಗೆ ಸರ್ಕಾರ ಈ ಕಾನೂನು ಪ್ರಕಾರ ಎಕರೆಗೆ 5 ರೂಪಾಯಿಗಳ ತೆರಿಗೆ ಕೊಡಬೇಕೆಂದು ಅವರ ಮೇಲೆ ಹೇರಿದರೆ ಅನ್ಯಾಯವಾಗುತ್ತದೆ. ಒಂದು ಕಡೆ ಖರ್ಚು ಮಾಡಬೇಕು, ಇನ್ನೊಂದು ಕಡೆ ತೆರಿಗೆ ಕೂಡಬೇಕು,

(ಶ್ರೀ ಸಂಜೀವನಾಥ ಐಕಳ)

ಹೀಗಾಗಿ ಅನ್ಯಾಯವಾಗುತ್ತದೆ. ಹೀಗಾದರೆ ಅವರು ಮಾಡಿರುವ ಒಳ್ಳೆಯ ಕೆಲಸಕ್ಕೆ ಶಿಕ್ಷೆ ಮಾಡಿದಂತಾಗುತ್ತದೆ. ಆದುದರಿಂದ ರೈತರು ಸ್ವಂತ ಖರ್ಚಿನಿಂದ, ಶ್ರಮದಿಂದ ಕೆಲಸ ಮಾಡುವಾಗ ಅದಕ್ಕೆ ಈ ವಿಧೇಯಕದಲ್ಲಿ ರಿಯಾಯಿತಿ ಕೊಡಬೇಕು. ಅದಕ್ಕೆ ಅವಕಾಶ ಮಾಡುವ ಅಗತ್ಯ ಬಹಳಷ್ಟಿದೆ. ಇಷ್ಟನ್ನು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸುತ್ತೇನೆ.

†ಶ್ರೀ ವೀರೇಂದ್ರ ಪಾಟೀಲ್ (ರೋಗೋಪಯೋಗಿ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ಇರಿಗೇಷನ್ ಬಿಲ್ಲಿನ ಮೇಲೆ ಈ ಸಭೆಯ ಅನೇಕ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನನಗೆ ತಿಳಿದಂತೆ ಈ ಬಿಲ್ಲಿನ ಮೇಲೆ ಮಾತನಾಡಿದಂತಹ ಮಾನ್ಯ ಸದಸ್ಯರೆಲ್ಲರೂ ಈ ಮಸೂದೆಯನ್ನು ಸ್ವಾಗತಿಸಿದ್ದಾರೆ. ಮತ್ತು ಇದರಲ್ಲಿರತಕ್ಕ ಕುಂದು ಕೊರತೆಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನೂ ಕೂಡ ವ್ಯಕ್ತಪಡಿಸಿದ್ದಾರೆ. ಕೆಲವು ಮಾನ್ಯ ಸದಸ್ಯರು ಈ ಮಸೂದೆಯನ್ನು ಹೊಸದಾಗಿ ತಂದಿದ್ದೇವೆ ಎನ್ನುವ ಉದ್ದೇಶದಿಂದ ಕೇವಲ ಮೇಂಟೆನೆನ್ಸ್ ಸೆಸ್ಸನ್ನು ಮಾತ್ರ ಹಾಕುತ್ತೇವೆ ಎನ್ನುವ ನೆಪ ಮಾಡಿಕೊಂಡು ಪ್ರತಿಯೊಂದು ಎಕರೆಗೂ 5 ರೂಪಾಯಿ ಸೆಸ್ಸನ್ನು ಹಾಕುವ ಉದ್ದೇಶದಿಂದ ಸರ್ಕಾರದವರು ಈ ಮಸೂದೆಯನ್ನು ತಂದಿದ್ದಾರೆಂದು ಹೇಳಿದರು. ಈ ಸಭೆಯ ವಿರೋಧ ಪಕ್ಷದ ನಾಯಕರು ಬಹುಶಃ ಅವರ ಎಲ್ಲಾ ಅಭಿಪ್ರಾಯಗಳಿಗೆಗಳನ್ನೂ ಕೂಡ ಇದು ಒಂದೇ ವಿಷಯವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಮಾತನಾಡಿದ್ದಾರೆಂದು ಕಾಣುತ್ತದೆ. ಅವರು ಮಾಡಿದಂತಹ ಭಾಷಣವನ್ನು ಕೇಳಿದರೆ ಬಹುಶಃ ಅವರು ತುರುವೆಕೆರೆಗೆ ಹೋಗಿ ಅಲ್ಲಿ ಜುನಾವಣೆಯ ಸಂಬಂಧದಲ್ಲಿ ಭಾಷಣವನ್ನು ಮಾಡಿ ಅದನ್ನೇ ಮನಸ್ಸಿನಲ್ಲಿಟ್ಟುಕೊಂಡು ಇಲ್ಲಿಗೆ ಬಂದು ಈ ಮಸೂದೆಯಮೇಲೆ ಮಾತನಾಡಿದ್ದಾರೋ ಏನೋ ಎಂಬ ಭಾವನೆ ಬರುತ್ತದೆ. ಅವರು ಹೇಳಿದ ಪ್ರಕಾರ ರೈತರು ಇವೊತ್ತು ನಮ್ಮ ನಾಡಿನ, ನಮ್ಮ ದೇಶದ ಅನ್ನದಾತರು, ಅವರ ಮೇಲೆ ಕರಬಾರವನ್ನು ಹೆಚ್ಚುಹೆಚ್ಚಾಗಿ ಹಾಕುತ್ತಿದ್ದೀರಿ, ಇದಕ್ಕಿಂತ ಅನ್ಯಾಯ, ಅತ್ಯಾಚಾರ ಬೇರೆ ಯಾವುದೂ ಇಲ್ಲ ರೈತನ ಬೆನ್ನುಮೂಳೆ ಮುರಿಯುವಂತೆ ಕರಭಾರವನ್ನು ಹಾಕುತ್ತಿದ್ದೀರಿ ಎಂದು ಹೇಳಿದರು. ಬಹುಶಃ ಅವರೇ ರೈತರ ಪ್ರತಿನಿಧಿಗಳು ಈ ಕಡೆ ಇರತಕ್ಕವರು, ಜುನಾವಣೆಯಲ್ಲಿ ಜನಗಳಿಂದ ಆರಿಸಿ ಬಂದಿರತಕ್ಕ ಮಾನ್ಯ ಸದಸ್ಯರುಗಳು ರೈತರ ಪ್ರತಿನಿಧಿಗಳಲ್ಲ ಎನ್ನುವ ಭಾವನೆ ಅವರಿಗೆ ಇರಬಹುದು ಎಂದು ಕಾಣುತ್ತದೆ. ಈ ಸಂದರ್ಭದಲ್ಲಿ ನಾನು ಅವರಿಗೆ ಹೇಳಬಯಸುತ್ತೇನೆ. ಅವರಿಗೆ ಹೇಗೆ ನಾವು ರೈತರ ಪ್ರತಿನಿಧಿಗಳಾಗಿ ಆರಿಸಿಬಂದಿದ್ದೇವೆಂದು ಹೇಳುವ ಒಂದು ಅಧಿಕಾರ ವಿದೆಯೋ ಅದೇ ರೀತಿ ಈ ಭಾಗದಲ್ಲಿ ಕುಳಿತುಕೊಂಡಿರತಕ್ಕ ಮಾನ ನಮಸ್ಕರೂ ಕೂಡ ನಾವು ರೈತರ ಪ್ರತಿನಿಧಿಗಳಾಗಿ ಆರಿಸಿಬಂದಿದ್ದೇವೆ ಎಂದು ಹೇಳತಕ್ಕ ಒಂದು ಅಧಿಕಾರ ಇದೆ. ನಾವು ಮೊದಲನೇ ಬಾರಿ ಈ ಸಭೆಗೆ ಆರಿಸಿ ಬಂದಿಲ್ಲ. ನಮ್ಮಲ್ಲಿರತಕ್ಕ ಅನೇಕ ಜನ ಮಾನ್ಯ ಸದಸ್ಯರು ಬಹುಶಃ ಎರಡು ಟರ್ಮ್ ಮೂರು ಟರ್ಮ್‌ಗಳಿಂದ ಒಂದೇ ಸಮನಾಗಿ ಈ ಸಭೆಗೆ ಆರಿಸಿ ಬಂದಿರತಕ್ಕ ಮಾನ್ಯ ಸದಸ್ಯರಾಗಿದ್ದಾರೆ. ಕೆಲವರಿಗೆ ಮೊದಲನೆಯ ಟರ್ಮ್ ಇರಬಹುದು. ಸಾಮಾನ್ಯವಾಗಿ ಯಾವ ಒಂದು ಟ್ಯಾಕ್ಸ್ ಹಾಕಬೇಕಾದರೂ ಸಹ ಪ್ರತಿಯೊಂದು ಸಲವೂ ವಿರೋಧ ಪಕ್ಷದವರು ಅದನ್ನು ವಿರೋಧ ಮಾಡುವದು ಸ್ವಾಭಾವಿಕ; ನಾನು ಮೊದಲನೇ ಮಾನ್ಯ ಸಭೆಗೆ ಪಾರ್ಥನೆಯನ್ನು ಮಾಡಿಕೊಂಡೆ; ನಮ್ಮ ದೇಶದ ಮುಂದೆ ಇರುವ ಥಾ ನೀರಾವರಿ ಸಮಸ್ಯೆ ಏನು ಎನ್ನುವಂಥಾದ್ದನ್ನು ನಾನು ತಮ್ಮ ಮುಂದೆ ಬಿಚ್ಚಿಹೇಳುತ್ತಿದ್ದೇನೆ. ಈ ನೀರಾವರಿಯ ಸಮಸ್ಯೆಯನ್ನು ಬಗೆಹರಿಸತಕ್ಕ ಜವಾಬ್ದಾರಿ ಆ ಕಡೆ ಕುಳಿತುಕೊಂಡಿರುವವರದು ಮಾತ್ರ, ನಮ್ಮದೇನು ಜವಾಬ್ದಾರಿ ಇಲ್ಲ ಎಂದು ಅವರು ತಿಳಿದುಕೊಂಡರೆ ಬಹುಶಃ ಜನರ ಪ್ರತಿನಿಧಿಗಳಾಗಿ ಆರಿಸಿಬಂದಿರತಕ್ಕ ನಾವು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿದ್ದಾರೆಯೇ ಎಂದು ಆ ಮಾತಿನಿಂದ ವ್ಯಕ್ತವಾಗುತ್ತದೆ. ಈ ನೀರಾವರಿಯ ಸಮಸ್ಯೆ ಯಾವ ಒಂದು ಪಕ್ಷ ಮತ್ತು ಪಂಗಡದ, ಪಾರ್ಟಿಯ ಸಮಸ್ಯೆ ಎಂದು ತಿಳಿದುಕೊಳ್ಳಬಾರದು. ಇದು ನಮ್ಮ ದೇಶದ ಸಮಸ್ಯೆ, ನಮ್ಮ ನಾಡಿನ ಸಮಸ್ಯೆ. ಎರಡು ಕೋಟಿ 24 ಲಕ್ಷ ಜನಗಳಿಗೂ ಸಂಬಂಧಪಟ್ಟಂಥ ಪ್ರಶ್ನೆ. ಅದನ್ನು ಬಗೆಹರಿಸಬೇಕಾದರೆ ಅದು ಈ ಭಾಗದ ಜವಾಬ್ದಾರಿ, ಆ ಭಾಗದ ಜವಾಬ್ದಾರಿ ಎಂದು ಯಾರೂ ತಿಳಿದುಕೊಳ್ಳದೆ ಪ್ರತಿಯೊಬ್ಬರೂ ಸಹ ಅದಕ್ಕೆ ಸಹಕಾರ ಮಾಡದ ಹೊರತು ಅದು ಬಗೆಹರಿಯುವುದಿಲ್ಲ ಎಂದು ನಾನು ಸ್ಪಷ್ಟ ಮಾಡುತ್ತೇನೆ. ಅನೇಕ ಮಾನ್ಯ ಸದಸ್ಯರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಅವುಗಳನ್ನು ವಿಚಾರ ಮಾಡುವುದಕ್ಕೆ ತಯಾರಾಗಿದ್ದೇನೆ. ಸಮಾನವಾಗಿ ಈ ಮಸೂದೆಯ ಮೇಲೆ ಮಾತನಾಡಿದಂತಹ ಅನೇಕ ಮಾನ್ಯ ಸದಸ್ಯರು ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿದರೆ ಒಳ್ಳೆಯದು ಎಂದು ಹೇಳಿದರು. ಅದಕ್ಕೊಸ್ಕರ ನಾನು ಸಂತೋಷದಿಂದ ಒಪ್ಪಿಕೊಂಡೆ.

ಯಾವುದೇ ಒಂದು ಮಸೂದೆಯಾಗಲೀ ಆತುರತೆಯಿಂದ ಅದನ್ನು ಪಾಸುಮಾಡಿಕೊಂಡು ಅದರಲ್ಲಿ ಡಿಫೆಕ್ಟ್ಸ್ ಇದ್ದರೆ ಅನಂತರ ಅದಕ್ಕೆ ಅಮೆಂಡ್‌ಮೆಂಟ್ ತರುವುದಕ್ಕೆ ಕಷ್ಟವಾಗುತ್ತದೆ. ಇದು ಬಹಳ ದೊಡ್ಡ ಸಮಸ್ಯೆ, ನೀರಾವರಿ ಯೋಜನೆಗಳು ಬಹಳ ಉಪಯುಕ್ತವಾದ ಯೋಜನೆಗಳು. ಇವು ಎಲ್ಲಾ ರೈತರಿಗೂ ಸಂಬಂಧಪಟ್ಟ ಸಮಸ್ಯೆಗಳು. ಆದ್ದರಿಂದ ಇವುಗಳನ್ನು ಕೂಲಂಕಷವಾಗಿ ವಿಚಾರಮಾಡೋಣ, ಅವರಲ್ಲಿ ಏನಾದರೂ ತಪ್ಪುಗಳಿದ್ದರೆ ಅವುಗಳನ್ನು ಸರಿಪಡಿಸೋಣ ಎನ್ನುವ ಉದ್ದೇಶದಿಂದ ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸೋಣ ಎಂದು ನಾನು ಮೊದಲೇನೆ ಒಪ್ಪಿಕೊಂಡಿದ್ದೇನೆ. ಆದ್ದರಿಂದ ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಹಾಕೋಣ, ಅಲ್ಲಿ ಇದನ್ನು ಕೂಲಂಕಷವಾಗಿ ವಿಚಾರಮಾಡಿ ನಂತರ ಇದನ್ನು ಪಾಸುಮಾಡೋಣ, ಎಂದು ವಿಚಾರ ಮಾಡಿಕೊಂಡಿದ್ದೇವೆ.

ಆಮೇಲೆ ಶ್ರೀಮಾನ್ ಘೋರ್ಪಡೆಯವರು ಹೇಳಿದರು ಇರಿಗೇಷನ್ ಕಮಿಷನ್ ಮಾಡಬೇಕೆಂದರು. ಆ ಒಂದು ಸಲಹೆ ಸ್ವಾಗತಾರ್ಹವಾಗಿದೆ. ಅದನ್ನು ಮಾಡುವುದು ಅವಶ್ಯಕ. ಆದರೆ ನಾವು ಇರಿಗೇಷನ್ ಕಮಿಷನ್ ಮಾಡಿ ಅವರಿಂದ ವರದಿ ಬಂದು ಅದರ ಬಗ್ಗೆ ನಾವು ಚರ್ಚೆ ಮಾಡಿ ಅನಂತರ ಇದರ ಬಗ್ಗೆ ವಿಚಾರ ಮಾಡೋಣವೆಂದರೆ ಅದು ಬಹುಶಃ ತಪ್ಪಾಗುತ್ತದೆ ಮತ್ತು ತಡವೂ ಆಗುತ್ತದೆ. ಮಹಾರಾಷ್ಟ್ರದಲ್ಲಿ ಏಳಾ ಒಂದು ಕಮಿಷನ್ ಮಾಡಿದ್ದಾರೆ. ಅವರು ಯಾವ ರೀತಿ ರೈತರಿಗೆ ನೀರಾವರಿಯ ಸೌಕರ್ಯವನ್ನು ಒದಗಿಸಿಕೊಟ್ಟಿದ್ದಾರೆಯೋ ಅದೇರೀತಿ ಇಲ್ಲಿಯೂ ಸಹ ಮಾಡಬೇಕು ಅದಕ್ಕೋಸ್ಕರ ನಮ್ಮ ರಾಜ್ಯದಲ್ಲಿಯೂ ಸಹ ಒಂದು ಕಮಿಷನ್ ಮಾಡಿ ಅವರ ಸಲಹೆಯನ್ನು ಪಡೆಯು ಅದರಂತೆ ರೈತರಿಗೆ ನೀರಾವರಿಯ ಸೌಕರ್ಯವನ್ನು ಕಲ್ಪಿಸಿಕೊಡಬೇಕು ಎಂದು ಮಾನ್ಯ ಸದಸ್ಯರು ಹೇಳಿದರು. ಇದರ ಬಗ್ಗೆ ನಾನು ಹೇಳಬೇಕಾಗಿದ್ದರೆ ಇದನ್ನು ನಾವು ವಿಚಾರ ಮಾಡುತ್ತಿದ್ದೇವೆ. ಇದನ್ನು ನಾವು ಯೋಗ್ಯರೀತಿಯಿಂದ ವಿಚಾರ ಮಾಡಿ ಇರಿಗೇಷನ್ ಕಮಿಷನ್ನಿನ ಅವಶ್ಯಕತೆ ನಮಗೆ ಕಂಡುಬಂದಾಗ ನಾವು ಅದನ್ನು ಮಾಡುತ್ತೇವೆ. ಇರಿಗೇಷನ್ ಕಮಿಷನ್ನಿಗೂ ಈ ಬಿಲ್ಲಿಗೂ ಸಂಬಂಧವನ್ನು ಜೋಡಿಸಿಕೊಂಡರೆ ಈ ಮಸೂದೆಯನ್ನು ತರುವುದು ತಡವಾಗುತ್ತದೆ, ಅನೇಕ ವರ್ಷಗಳಿಂದ ರೈತರೂ ಮತ್ತು ಈ ಮಾನ್ಯ ಸಭೆಯ ಮಾನ್ಯ ಸದಸ್ಯರೆಲ್ಲರೂ ಈ ಮಸೂದೆ ಆದಷ್ಟು ಜಾಗ್ರತೆ ಬರಬೇಕೆಂದು ಆತುರತೆಯನ್ನು ಹೊಂದಿದ್ದಾರೆ ಎನ್ನುವ ದೃಷ್ಟಿಯಿಂದ ನಾವು ಈ ಮಸೂದೆಯನ್ನು ಈಗ ಈ ಸಭೆಯುಮುಂದೆ ತಂದಿದ್ದೇವೆ.

ಒಂದು ಎಕರೆಗೆ ೫ ರೂಪಾಯಿ ಮೇಂಟೆನೆನ್ಸ್ ಸೆಸ್ ಹಾಕುತ್ತಿದ್ದಾರೆ ಇದು ಯಾತಕ್ಕೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ವಾಟರ್ ರೇಟನ್ನೂ ಹಾಕಿ ಮೇಂಟೆನೆನ್ಸ್ ಸೆಸ್ಸನ್ನೂ ಹಾಕುವುದು ಕಾನ್‌ಸ್ಟಿಟ್ಯೂಷನ್ ಪ್ರಕಾರ ಸರಿಹೋಗುವುದಿಲ್ಲ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಅದರ ವಿಚಾರವನ್ನು ಕೂಡ ನಾನು ಈಗ ತಮ್ಮ ಮುಂದೆ ಹೇಳುತ್ತೇನೆ. ಮೇಂಟೆನೆನ್ಸ್ ಸೆಸ್ಸಿನ ಅವಶ್ಯಕತೆ ಏತಕ್ಕೆ ಇದೆ, ವಾಟರ್ ರೇಟಿಗೂ ಇದಕ್ಕೂ ವ್ಯತ್ಯಾಸವೇನು ಎಂಬುದನ್ನು ನಾನು ಹೇಳುತ್ತೇನೆ. ವಿರೋಧ ಪಕ್ಷದ ಕೆಲವು ಮಾನ್ಯ ಸದಸ್ಯರೂ ಕೂಡ ಈ ಮಸೂದೆಯನ್ನು ಸ್ವಾಗತ ಮಾಡಿದ್ದಾರೆ, ಅದಕ್ಕೋಸ್ಕರ ನನಗೆ ಬಹಳ ಸಂತೋಷವಾಗುತ್ತದೆ. ಶ್ರೀಮಾನ್ ಮಾದಪ್ಪ ಗೌಡರು ಹೇಳಿದರು ನೀವು ಒಂದು ಎಕರೆಗೆ ೫ ರೂಪಾಯಿ ಮೇಂಟೆನೆನ್ಸ್ ಹಾಕಿದರೂ ಚಿಂತೆಯಿಲ್ಲ, ನಾವು ಅದನ್ನು ಕೊಡುವುದಕ್ಕೆ ತಯಾರಾಗಿದ್ದೇವೆ. ಆದರೆ ನಮಗೆ ನೀರಾವರಿಯ ಸೌಕರ್ಯವನ್ನು ಸರಿಯಾಗಿ ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡಿ ಎಂದು. ವೇಸ್ಟ್ ವೇರ್ ಹೋಗುವುದನ್ನು ಜೋಪಾನ ಮಾಡಿ ನಾವು ೫ ರೂಪಾಯಿಗಳನ್ನು ಕೊಡುವುದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ರೀತಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಈ ಮಸೂದೆಯನ್ನು ಸ್ವಾಗತಮಾಡಿರುವುದರಿಂದ ನನಗೆ ಬಹಳ ಸಂತೋಷವಾಗುತ್ತದೆ. ಇರಿಗೇಷನ್ ಟ್ಯಾಕ್ಸೇಷನ್ ಬಗ್ಗೆ ಬೆಟರ್‌ಮೆಂಟ್ ಲೆವಿ, ಕಾಂಟ್ರಿಬ್ಯೂಷನ್ ವಾಟರ್ ರೇಟ್, ಇವುಗಳು ಈಗಾಗಲೇ ಜಾರಿಯಲ್ಲಿದ್ದುವು, ಈಗ ಇದರ ಜೊತೆಗೆ ಮೇಂಟೆನೆನ್ಸ್ ಬೇರೆ ಬಂದಿದೆ ಎಂದು ವಿರೋಧ ಪಕ್ಷದ ನಾಯಕರು ಹೇಳಿದರು. ಈ ಇರಿಗೇಷನ್ನಿಗೆ ಸಂಬಂಧಪಟ್ಟಂತೆ ಬೆಟರ್‌ಮೆಂಟ್ ಲೆವಿ, ಕಾಂಟ್ರಿಬ್ಯೂಷನ್, ವಾಟರ್ ರೇಟ್ ಇವುಗಳು ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲೂ ಜಾರಿಯಲ್ಲಿವೆ. ಮೇಂಟೆನೆನ್ಸ್ ಸೆಸ್ಸು ಮತ್ತು ಬೆಟರ್‌ಮೆಂಟ್ ಲೆವಿ ಇವುಗಳನ್ನು ಹಾಕುವ ಉದ್ದೇಶವೇನೆಂದರೆ ಎಲ್ಲಿಯಾದರೂ ಸರ್ಕಾರದವರು ಕೆರೆ, ಕಟ್ಟೆ, ಕಾಲುವೆ ಮುಂತಾದುವುಗಳನ್ನು ಕಟ್ಟಿಸಿದರೆ ಅವಗಳ ಕೆಳಗಡೆ ಇರತಕ್ಕ ಭೂಮಿಯ ಕಿಮ್ಮತ್ತು ತಾನಾಯೇ ಹೆಚ್ಚುತ್ತದೆ. ಕೆರೆ ಕಟ್ಟೆಗಳಲ್ಲದೆ ಕೆಲವು ಕಡೆ ದೊಡ್ಡ ಪ್ರಾಜೆಕ್ಟುಗಳು ಆದಮೇಲೂ ಸಹ ಅವುಗಳ ಕೆಳಗೆ ಇರತಕ್ಕ ಭೂಮಿಯ ಮಾರ್ಕೆಟ್ ಬೆಲೆ ಹೆಚ್ಚಾಗುತ್ತದೆ. ಸರ್ಕಾರದವರು ಯಾವುದೇ ಒಂದು ಪ್ರಾಜೆಕ್ಟ್ ಮಾಡಿದರೂ ಸಹ ಅದರ ಕೆಳಗೆ ನೀರು ಬರುತ್ತದೆ. ಅದಕ್ಕೋಸ್ಕರ ಆ ಭೂಮಿಯ ಮಾರ್ಕೆಟ್ ಬೆಲೆ ಹೆಚ್ಚಾಗುತ್ತದೆ.

(ಶ್ರೀ ವೀರೇಂದ್ರ ಪಾಟೀಲ್)

ಹೀಗೆ ಯಾವುದೇ ವಿಧದಿಂದಲೂ ತನ್ನ ದುಡಿಮೆಯಿಲ್ಲದೆ ತನ್ನ ಭೂಮಿಗೆ ಹೆಚ್ಚು ಕಿಮ್ಮತ್ತು ಬಂದರೆ ಅದರಲ್ಲಿ ಒಂದು ಭಾಗವನ್ನು ಆತನು ಸರ್ಕಾರಕ್ಕೆ ಕೊಡಬೇಕು. ಆದಕಾರಣ ಅದರ ಮೇಲೆ ಒಂದು ಕರ ಹಾಕುವುದು ಅನ್ಯಾಯವೆಂದು ಯಾರೂ ಹೇಳುವುದಿಲ್ಲ. ಮೊದಲು ಆ ಭೂಮಿಯ ಬೆಲೆ 200 ರೂಪಾಯಿ ಇದ್ದು ಸರ್ಕಾರದ ಒಂದು ಯೋಜನೆ ಅಲ್ಲಿಗೆ ಬಂದಮೇಲೆ ಅದರ ಬೆಲೆ 800 ರೂಪಾಯಿ ಆಗುತ್ತದೆ. ಹೀಗೆ 600 ರೂಪಾಯಿ ಹೆಚ್ಚು ಬಂದರ ಅವರ ಮೇಲೆ 200-300 ರೂಪಾಯಿ ಬೆಟರ್‌ಮೆಂಟ್ ಲೆವಿ ಹಾಕಿದರೆ ಅದು ಹೆಚ್ಚೇನೂ ಅಲ್ಲ.....

ಶ್ರೀ ಸಂಜೀವನಾಥ ಐಕಳ.—ಮೂರು ನಾಲ್ಕು ತೆರಿಗೆಗಳನ್ನು ಮಾಡುವುದಕ್ಕಿಂತ ಒಂದೇ ಹೆಡ್‌ನಲ್ಲಿ ತೆಗೆದುಕೊಳ್ಳಿ ಎಂದು ನಾವು ಹೇಳುವುದು.

ಶ್ರೀ ವೀರೇಂದ್ರ ಪಾಟೀಲ್.—ಹತ್ತು ರೂಪಾಯಿ ಕೊಡಬೇಕಾದವನು ಅದನ್ನು ಮೂರು ನಾಲ್ಕು ಹೆನರಿನಿಂದ ಕೇಳಲಿ ಅಥವಾ ಒಂದೇ ಹೆಸರಿನಿಂದ ಕೇಳಲಿ ಕೊಡುತ್ತಾನೆ. ಎಲ್ಲವನ್ನೂ ಸೇರಿಸಿ ಒಟ್ಟು ಇಷ್ಟು ಹಣವನ್ನು ತೆರಿಗೆಯಾಗಿ ಹಾಕುತ್ತೇವೆಂದು ಹೇಳುವುದು ಕಾನೂನಿನ ಪ್ರಕಾರ ಸರಿಯಾಗುವುದಿಲ್ಲ. ಹಾಗೆ ಮಾಡಿ ಅದು ಕೋರ್ಟಿಗೆ ಹೋದರೆ ಅಲ್ಲಿ ನಿಲ್ಲುವುದಿಲ್ಲ. ಯಾವುವಾದರೂ ಕಾನೂನು ಮಾಡುವಾಗ ಅದರಲ್ಲಿ ಒಂದು ಅವಕಾಶ ಮಾಡಬೇಕಾಗುತ್ತದೆ. ಈ ಬೆಟರ್‌ಮೆಂಟ್ ಲೆವಿ ರೈತರು ಕೊಡುವ ಒಂದು ತೆರಿಗೆ. ಹೀಗೆ ತೆಗೆದುಕೊಂಡರೆ ಕ್ಯಾಪಿಟರ್ ಕಾಸ್ಟ್ ಕಡಮೆಯಾಗುವುದಕ್ಕೆ ಒಂದು ಮಾರ್ಗವಾಗುತ್ತದೆ. ಒಂದು ಯೋಜನೆಗೆ ಹತ್ತು ಕೋಟಿ ರೂಪಾಯಿ ಖರ್ಚಾದರೆ ಅದಕ್ಕೆ ಹಾಕಿದ ಹಣವನ್ನು ಪುನಃ ಪಡೆಯಬೇಕಾಗುತ್ತದೆ. ಇಲ್ಲದಿದ್ದರೆ ಬೇರೆ ಹೊಸ ಯೋಜನೆ ಮಾಡುವುದಕ್ಕೆ ಹಣವಿರುವುದಿಲ್ಲ, ನಾವು ಖರ್ಚು ಮಾಡುವ ಹಣಕ್ಕೆ ರೈತ ಕೊಡುವುದು ಸಹಾಯವಾಗುತ್ತದೆ. ವಾಟರ್‌ರೇಟ್ ಹಾಕುವ ಉದ್ದೇಶವೇನೆಂದರೆ, ಸರ್ಕಾರ ಒದಗಿಸುವ ನೀರಿನ ಮೇಲೆ ಸರ್ಕಾರದ ಅಧಿಕಾರವಿದೆ, ಆದಕಾರಣ ಆ ನೀರನ್ನು ಯಾರಿಗೆ ಕೊಡಬೇಕಾದರೂ ಅದರ ಮೇಲೆ ತೆರಿಗೆ ಹಾಕಬೇಕಾಗುತ್ತದೆ; ಹಾಕುತೆ ರೆವೆ. ರೈತ ತನ್ನ ಭೂಮಿಗೆ ಯಾವ ರೀತಿ ನೀರನ್ನು ಉಪಯೋಗ ಮಾಡುತ್ತಾನೋ ಅದರ ಮೇಲೆ ಇದೊಂದು ಕರ. ಯಾವುದೇ ಒಂದು ಯೋಜನೆಯಾದರೂ ಅದಕ್ಕಾಗಿ ಹಣವನ್ನು ಖರ್ಚು ಮಾಡಿರುತ್ತೇವೆ. ಅದಕ್ಕೆ ಬಡ್ಡಿ ಬರುವ ಹಾಗೆ ಪ್ರಯತ್ನ ಮಾಡಬೇಕೆಂದು ಯೋಚನೆ ಮಾಡುತ್ತೇವೆ. ಈ ಸಂಬಂಧವಾಗಿ ಒಂದು ವಿಷಯವನ್ನು ಹೇಳುವುದಾದರೆ, ಕೆಲವು ನೀರಾವರಿ ಯೋಜನೆಗಳ ಕೆಳಗೆ ಆಚ್ಚುಕಟ್ಟು ಪ್ರದೇಶ ಇವೆ, ಅವುಗಳಿಂದ ಈ ಯೋಜನೆಗಳಿಗಾಗಿ ನಾವು ಖರ್ಚು ಮಾಡಿರುವ ಹಣದ ಬಡ್ಡಿ ಕೂಡ ಬಾರದೇ ಇರುವ ಪರಿಸ್ಥಿತಿಯಿದೆ. ಹೀಗಿರುವಾಗ ನಾವು ಜಲಾಶಯವನ್ನು ಕಟ್ಟಿಸಿ ನೀರನ್ನು ಕೊಡುವಾಗ ಅದರಿಂದ ಲಾಭ ಪಡೆಯುವವನು ನಮಗೆ ಕರ ಕೊಡಬೇಕಾಗುತ್ತದೆ. ಕೋಟ್ಯಾಂತರ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ಮತ್ತು ಸಾರ್ವಜನಿಕರಿಂದ ಸಾಲ ಪಡೆದು ಖರ್ಚುಮಾಡಿ ಜಲಾಶಯವನ್ನು ಕಟ್ಟಿಸುತ್ತಿದ್ದೇವೆ. ಈ ಸಾಲದ ಮೇಲೆ ನಾವು ಶೇಕಡ ನಾಲ್ಕೂವರೆ ಐದರಂತೆ ಬಡ್ಡಿ ಕೊಡಬೇಕಾಗುತ್ತದೆ. ಈ ಬಡ್ಡಿಯನ್ನು ವಾಟರ್‌ರೇಟ್ ಮೂಲಕ ವಸೂಲು ಮಾಡುವ ಉದ್ದೇಶವಿದೆ. ಮೂರನೆಯದು ಮೇಂಟೆನೆನ್ಸ್ ಸೆಸ್. ಜಲಾಶಯ ಮತ್ತು ಕೆರೆಗಳನ್ನು ಕಟ್ಟಿಸಿದ ಮೇಲೆ ಅವುಗಳ ಸಾಲಾಬಾದು ಕಾಮಗಾರಿಗಳನ್ನು ಮಾಡಿ ಸರಿಯಾದ ಸ್ಥಿತಿಯಲ್ಲಿಡಬೇಕಾಗುತ್ತದೆ. ಅವುಗಳ ಕಾಲುವೆಗಳು, ಡ್ರೇನೇಜು, ತೂಬುಗಳು ಇವೆಲ್ಲವನ್ನೂ ಮೇಂಟೇನ್ ಮಾಡಬೇಕಾಗುತ್ತದೆ. ದುರಸ್ತಿ, ರಿಪೇರಿ ಮಾಡಬೇಕಾಗುತ್ತದೆ. ಆದುದರಿಂದ ಮೇಂಟನೆನ್ಸ್ ಸೆಸ್ 5 ರೂಪಾಯಿ ಪ್ರಕಾರ ಹಾಕುವ ವಿಚಾರ ಇದರಲ್ಲಿದೆ. ಈಗಾಗಲೇ ನಾನು ಹೇಳಿರುವಂತೆ, ನಮ್ಮ ಮೈಸೂರು ದೇಶದಲ್ಲಿ ನೀರಾವರಿ ಯೋಜನೆ ಒಂದು ದೊಡ್ಡ ಸಮಸ್ಯೆಯಾಗಿದೆ. ಏಕೆಂದರೆ, ನಮ್ಮ ದೇಶದ ಇರಿಗೇಷನ್ ಪೊಟೆಷಿಯಲ್ ಕೇವಲ 23.5 ಶೇಕಡ. ಎಂದರೆ ನಮ್ಮ ದೇಶದಲ್ಲಿ ಹರಿಯುವ ಎಲ್ಲ ನದಿಗಳ, ಎಲ್ಲ ನಾಲೆಗಳ, ಎಲ್ಲ ಹಳ್ಳಗಳ ಒಂದೊಂದು ತೊಟ್ಟು ನೀರನ್ನೂ ಬಿಡದೆ ಹಾರ್ನೆಸ್ ಮಾಡಿ ಕೆರೆ ಕಟ್ಟೆಗಳನ್ನು ಕಟ್ಟಿಸಿ ಅವುಗಳಿಂದ ಭೂಮಿಗೆ ನೀರು ಕೊಡುವ ಅವಕಾಶ ಮಾಡಿದರೂ ಒಂದು ನೂರು ಎಕರೆಗೆ 23.5ಕ್ಕಿಂತ ಹೆಚ್ಚು ನೀರು ಕೊಡುವುದಕ್ಕೆ ಸಾಧ್ಯವಿಲ್ಲ. ಇದು ದೇವರು ನಮ್ಮ ಮೇಲೆ ಹಾಕಿರುವ ನಿಯಂತ್ರಣ ಅಥವಾ ಹೆಚ್ಚೋಟಿ. ಇದು ದೇಶದ ಪ್ರಶ್ನೆ. ಶೇಕಡ 23.5ಕ್ಕಿಂತ ಒಂದು ತೊಟ್ಟು ಕೂಡ ಹೆಚ್ಚು ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಸಂಜೀವನಾಥ ಐಕಳ.—ಪಂಪಿನಿಂದ ನೀರನ್ನೆತ್ತಿ ಉಪಯೋಗ ಮಾಡುವುದಕ್ಕೂ ಆಗುವುದಿಲ್ಲವೆ? ನಮಗೆ ಕೊಟ್ಟಿರುವ ನೀರು ಇಷ್ಟೇ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ವೀರೇಂದ್ರ ಪಾಟೀಲ್.—ನಮ್ಮಲ್ಲಿ ಎಷ್ಟು ನದಿಗಳಿವೆಯೋ ಅವುಗಳ ನೀರಿನಲ್ಲಿ ನಮ್ಮ ಪಾಲು ಮಾತ್ರ ರೆಕ್ಕೆ ಹಾಕಬೇಕು. ಕೃಷ್ಣಾ, ಗೋದಾವರಿ, ಪೆನ್ನಾರ್, ಪಾಲಾರ್ ಮುಂತಾದ ಎಲ್ಲ

ನಿಗಳು ಮತ್ತು ಉಪನದಿಗಳು ನೀರಿನಲ್ಲಿ ನಮ್ಮ ಪಾಲು ಏನಿದೆಯೋ ಆ ಪಾಲನ್ನು ಲೆಕ್ಕ ಹಾಕಿ ಅದನ್ನು ಸಂಪೂರ್ಣವಾಗಿ ಹಾರ್ನೆಸ್ ಮಾಡಿದರೆ, ಆ ನೀರನ್ನು ನಮ್ಮ ಭೂಮಿಗೆ ಹಾಯಿಸಿದರೆ ಸೇಕಡ 23.5ರ ಮೇಲೆ ಹೋಗುವುದಕ್ಕಾಗುವುದಿಲ್ಲವೆಂದು ನಮ್ಮ ಇಂಜಿನಿಯರುಗಳು ಅಂದಾಜು ಮಾಡಿದ್ದಾರೆ. ಸಬ್‌ಸಾಯಿಲ್ ನೀರನ್ನು ತೆಗೆದುಕೊಂಡರೆ ಶೇಕಡ 30ರ ಮೇಲೆ ಹೋಗುವ ಹಾಗಿಲ್ಲ. ಇದನ್ನು ನಾವು ವಿಚಾರ ಮಾಡಬೇಕಾಗಿದೆ. ಈಗ ನಮ್ಮ ಪರಿಸ್ಥಿತಿ ಹೇಗಿದೆಯೆಂದು ನೋಡಿದರೆ, ನಮ್ಮ ನೀರಾವರಿ ಶೇಕಡ ಐದೂವರೆ ಅಥವಾ ಆರರಷ್ಟಿದೆ. 20-22 ಲಕ್ಷ ಎಕರೆ ಮಾತ್ರ ನೀರಾವರಿಯಾಗಿದೆ. ಒಟ್ಟು ಭೂಮಿ ಇರುವುದು 480 ಲಕ್ಷ ಎಕರೆ; ಅದರಲ್ಲಿ ಕಲ್ಟಿವೇಬಲ್ 350 ಲಕ್ಷ ಎಕರೆ; ಸಾಗುವಳಿಯಾಗುವ 350 ಲಕ್ಷ ಎಕರೆಗಳಲ್ಲಿ ಕೇವಲ 22 ಲಕ್ಷಕ್ಕೆ ಮಾತ್ರ ನೀರಾವರಿಯಾಗುತ್ತಿದೆ. ಉಳಿದುದು ಖುಷ್ಕಿ ಜಮೀನು. 1ನೆಯ, 2ನೆಯ ಮತ್ತು ಮೂರನೆಯ ಪಂಚವಾರ್ಷಿಕ ಯೋಜನೆಗಳನ್ನು ಮುಗಿಸಿದರೂ ನಮ್ಮ ನೀರಾವರಿ ಕೇವಲ ಶೇಕಡ 8.4ರಷ್ಟಿದೆ. 4, 5, 6ನೆಯ ಯೋಜನೆಗಳು ಆದಮೇಲೆ ಹೆಚ್ಚಬಹುದು. ಅಥವಾ ಸೇಕಡ 24 ಆಗ ಬೇಕಾದರೆ ಎಷ್ಟು ವರ್ಷ ಬೇಕಾಗುತ್ತದೆಂದು ಯೋಚನೆ ಮಾಡಬೇಕು. ಮೂರನೆಯ ಯೋಜನೆಯನ್ನು ಸಂಪೂರ್ಣವಾಗಿ ಮುಗಿಸಿದರೆ ಸೇಕಡ 8.4 ರಷ್ಟಾಗುತ್ತದೆ. ಇಷ್ಟು ಮುಟ್ಟಬೇಕಾದರೆ ಎಷ್ಟು ಹಣ ಬೇಕೆಂಬುದನ್ನು ಹೇಳುತ್ತೇನೆ. ನೆರೆ ಪ್ರಾಂತಗಳಿಗೆ ಹೋಲಿಸಿದರೆ ನಾವು ಈ ವಿಷಯದಲ್ಲಿ ಎಷ್ಟು ಹಿಂದಿದ್ದೇವೆ, ಎಷ್ಟು ಮುಂದೆ ಓಡಬಹುದು, ಎಷ್ಟುಮಟ್ಟಿಗೆ ಓಡುತ್ತಿದ್ದೇವೆ ಎಂಬುದು ವ್ಯಕ್ತವಾಗುತ್ತದೆ. ಎಷ್ಟು ದೊಡ್ಡ ಪ್ರಶ್ನೆ ನಮ್ಮ ಮುಂದಿದೆ ಎಂಬುದನ್ನು ನೋಡಬೇಕು. 8.4ರಷ್ಟು ಬರಬೇಕಾದರೂ ನಾವು ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಆಂಧ್ರದಲ್ಲಿ ಸೇಕಡ 28ರಷ್ಟಿದೆ. ನಾಗಾರ್ಜುನ ಸಾಗರದ ಯೋಜನೆಯನ್ನು ಕೃಷ್ಣಾ ನದಿಯ ನೀರಿನಲ್ಲಿ ಅರ್ಧವನ್ನು ಉಪಯೋಗಿಸುವಷ್ಟು ಮಾಡುತ್ತಿದ್ದಾರೆ. ಇನ್ನೂ ಪೂರ್ತಿ ಮಾಡಿಲ್ಲವಾದರೂ ಈಗಲೇ ಸೇಕಡ 26ರಷ್ಟಿದೆ. ಮದರಾಸಿನಲ್ಲಿ ಈಗಾಗಲೇ ಸೇಕಡ 40ರಷ್ಟು ಮುಟ್ಟಿದ್ದಾರೆ. ಇನ್ನೂ ಮುಂದೆ ಹೋಗುತ್ತಾರೆ. ಎಷ್ಟು ನೀರಿದ್ದರೂ ಅದನ್ನು ಸಮುದ್ರಕ್ಕೆ ಬಿಡದಿರುವ ಹಾಗೆ ವ್ಯವಸ್ಥೆ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಅದರೆ ನಾವು ಎಷ್ಟೇ ಪ್ರಯತ್ನಪಟ್ಟರೂ ಸೇಕಡ 2ರ ಮೇಲೆ ಹೋಗುವ ಹಾಗಿಲ್ಲ. ಈ ವೇಗದ ಹೋದರೆ ಇನ್ನೂರು 50-100 ವರ್ಷಗಳಾಗಬಹುದು. ಅದುದರಿಂದ ನಾವು ತ್ಯಾಗ ಮಾಡಬೇಕು. ಐದು ರೂಪಾಯಿ ಮೈಂಟೆನೆನ್ಸ್ ಸೆಸ್ ಹಾಕಿದರೆ ರೈತನ ಬೆನ್ನು ಮೂಳೆ ಮುರಿಯುತ್ತದೆಂದು ಹೇಳುತ್ತಾರೆ. ಅದು ಸರಿಯಲ್ಲ.

ಶ್ರೀ ಜಿ. ಎ. ಗೌಡ (ಪಾಳ್ಯ).—ಮೈಂಟೆನೆನ್ಸ್ ಸೆಸ್ ಎಂದೇಕೆ ಬೇರೆ ರೀತಿ ಮಾಡಿ, ಕಾಂಟ್ರಿಬ್ಯೂಷನ್ ಹಾಕಿ.....

2-30 P.M.

ಶ್ರೀ ವೀರೇಂದ್ರ ಪಾಟೀಲ್.—ಇವುಗಳ ಮೈಂಟೆನೆನ್ಸಿಗೆ ಇನ್ನೂ ಎಷ್ಟು ದುಡ್ಡು ಬೇಕಾಗುತ್ತದೆ ಎಂಬುದು ಗೊತ್ತಿಲ್ಲ. ಅಂತೂ ನಮಗೆ ಹೆಚ್ಚಿಗೆ ದುಡ್ಡು ಬೇಕಾಗುತ್ತದೆ. ಆದಾಗ್ಯೂ ನಾವು ಈಗ ಸದ್ಯಕ್ಕೆ 5 ರೂಪಾಯಿಗಳು ಸಾಕಾಗಬಹುದು ಎಂಬ ಒಂದು ಅಂದಾಜಿನ ಮೇಲೆ ಇದನ್ನು ಹಾಕಿದ್ದೇವೆ. ಇದು ವರ್ಷಂದಕ್ಕೆ ಇನ್ನೂ 7—8 ರೂಪಾಯಿಗಳಿಗೆ ಹೋಗಬಹುದು. ಈಗ ಸಾಲದೆ ಬರತಕ್ಕ ಹಣಕ್ಕೇನು ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದೇವೆ. ಈ ದಿವಸ ಒಮ್ಮೆಲೇ ರೈತನ ಮೇಲೆ 7-8 ರೂಪಾಯಿಗಳನ್ನು ಹಾಕುವುದು ಬೇಡ ಎಂದು ನಾವಾಗೇ ಅದನ್ನು ತಡೆವಿಟ್ಟಿದ್ದೇವೆ. ಆದರೆ ಇದೇ ಸಭೆಯಲ್ಲಿ ಕೆಲವು ಮಾನ್ಯ ಸದಸ್ಯರು ಈ 5 ರೂಪಾಯಿಗಳ ತೆರಿಗೆಯನ್ನು ಸರ್ಕಾರದವರು ಯಾವ ಸೈಂಟಿಫಿಕ್ ಬೇಸಿಸ್ ಮೇಲೆ ಹಾಕಿದ್ದೀರಿ ಎಂಬುದಾಗಿ ಪ್ರಶ್ನೆ ಮಾಡಿದ್ದಾರೆ. ನಿಜ ಈಗ ನಾವು ಹಾಕಿರಬಹುದು ಅಷ್ಟು ಸೈಂಟಿಫಿಕ್ಕಾಗಿ ಹಾಕಿಲ್ಲ. ನಾವು ಸೈಂಟಿಫಿಕ್ಕಾಗಿ ಹಾಕಿದ್ದರೆ ಇನ್ನೂ ಜಾಸ್ತಿ ಹಾಕಬೇಕಾಗಿತ್ತು. ನ್ಯಾಯವಾಗಿ ಎಷ್ಟು ಹಾಕಬೇಕೆಂಬುದನ್ನು ತಾವೆಲ್ಲರೂ ಒಪ್ಪಿಕೊಳ್ಳುವುದಾದರೆ, ಅಷ್ಟನ್ನೂ ಹಾಕಿ ಎಂದು ಹೇಳುವುದಾದರೆ ನಾನು ಅದನ್ನು ವಿಚಾರ ಮಾಡುತ್ತೇನೆ. ಸರ್ಕಾರದವರಿಗೆ ಈ ದಿವಸ ಎಷ್ಟು ದುಡ್ಡಿದ್ದರೂ ಸಾಲದಾಗಿದೆ. ಈ ಇರಿಗೇಷನ್ ಸಲುವಾಗಿ ಎಷ್ಟು ಖರ್ಚುಮಾಡಬೇಕೋ ಅಷ್ಟನ್ನೂ ಖರ್ಚುಮಾಡಲು ನಮ್ಮಲ್ಲೀಗ ಹಣವಿಲ್ಲ. ನಮಗೆ ಈ ಹಿಂದೆ ಕಳೆದುಕೊಂಡ ಮೊದಲನೆಯ ಪ್ಲಾನಿಗೆ ಎಷ್ಟು ದುಡ್ಡು ಬೇಕಾಗಿತ್ತು, ನಾವು ಎಷ್ಟು ದುಡ್ಡನ್ನು ಖರ್ಚುಮಾಡಿದೆವೆ ಎಂಬುದನ್ನು ನಾನೀಗ ತಮಗೆ ತಿಳಿಸಲಿಚ್ಛಿಸುತ್ತೇನೆ. ನಮಗೆ ಮೊದಲನೆಯ ಪ್ಲಾನಿನಲ್ಲಿದ್ದ ಒಟ್ಟು ಸ್ಕೀಮುಗಳು 11. ಅವುಗಳಲ್ಲಿ ಮೂರು ಮೇಜರ್ ಮತ್ತು ಇನ್ನುಳಿದ 8 ಮೈನರ್ ವರ್ಕ್ಸ್‌ಗಳು. ಇವುಗಳಿಗೆ ಎಸ್ಟಿಮೇಟೆಡ್ ಕಾಸ್ಟ್ ಆಫ್ ವರ್ಕ್ಸ್ ಎಷ್ಟಿ

L.A.

(ಶ್ರೀ ವೀರೇಂದ್ರ ಪಾಟೀಲ್)

ತ್ತೇದರೆ 83 ಕೋಟಿ, 72 ಲಕ್ಷ ರೂಪಾಯಿಗಳು. ನಾವು ಮೊದಲನೆಯ ಪ್ಲಾನಿನಲ್ಲಿ ಖರ್ಚು ಮಾಡಿದ ಮೊಬಲಗು 37 ಕೋಟಿ, 2 ಲಕ್ಷ ರೂಪಾಯಿಗಳು. ಇದಾದ ನಂತರ ನಮ್ಮ ಎರಡನೇ ಪ್ಲಾನಿನಲ್ಲಿ 14 ಹೊಸ ಸ್ಕೀಮುಗಳನ್ನು ಕೈಗೊಳ್ಳಲಾಯಿತು. ಇವುಗಳಲ್ಲಿ—3 ಮೇಜರ್, 11 ಮೈನರ್. ನಮಗೆ ಎರಡನೇ ಪ್ಲಾನಿನ ಹೊತ್ತಿಗೆ ಕೆಲಸ ನಡೆಯುತ್ತಿದ್ದ ಯೋಜನೆಗಳೆಷ್ಟೆಂದರೆ ಒಟ್ಟು 25 ಕೆಲಸಗಳು ನಡೆಯುತ್ತಿದ್ದವು. ಹೀಗೆ ಒಂದು ಮತ್ತು ಎರಡನೇ ಪ್ಲಾನಿನಿಂದ ಕೈಗೊಂಡ ಕೆಲಸಗಳ ಒಟ್ಟು ಮೊತ್ತವು 127 ಕೋಟಿ, 12 ಲಕ್ಷ ರೂಪಾಯಿಗಳು. ನಾವು ಮೊದಲನೆಯ ಪ್ಲಾನಿನಲ್ಲಿ 37 ಕೋಟಿ 28 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದೆವು. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಯೋಜನೆಗಾಗಿ 26 ಕೋಟಿ, 69 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇನ್ನು ನಮ್ಮ ಮೂರನೇ ಪ್ಲಾನಿನ ವಿಚಾರಕ್ಕೆ ಬಂದರೆ ಇದರಲ್ಲಿ ಹೊಸದಾಗಿ ಕೈಗೊಂಡ ಕೆಲಸಗಳು 7 ಮಾತ್ರ. ಇವುಗಳಲ್ಲಿ 3 ಮೇಜರ್, 4 ಮೈನರ್ ಕೆಲಸಗಳು. ಇವುಗಳ ಎಸ್ಟಿಮೇಟೆಡ್ ಕಾಸ್ಟ್ 96 ಕೋಟಿ, 65 ಲಕ್ಷ ರೂಪಾಯಿಗಳು. ಹೀಗೆ ಇಲ್ಲಿಯವರೆಗೆ ನಾವು ಈ ಪಂಚವಾರ್ಷಿಕ ಯೋಜನೆಗಳ ಬಗ್ಗೆ ಒಂದು, ಎರಡು ಮತ್ತು ಮೂರು ಈ ಮೂರು ಯೋಜನೆಗಳಿಂದಲೂ ಖರ್ಚುಮಾಡಿರತಕ್ಕ ಒಟ್ಟು ಮೊಬಲಗು ಎಷ್ಟೆಂದರೆ 220 ಕೋಟಿ 77 ಲಕ್ಷ ರೂಪಾಯಿಗಳು. ಆದರೆ ಇಷ್ಟನ್ನೂ ನಾವು ಖರ್ಚುಮಾಡಿಲ್ಲ. ಈವರೆಗೆ ನಾವು ಖರ್ಚುಮಾಡಿರುವ ಹಣ ಎಷ್ಟೆಂದರೆ: 183 ಕೋಟಿ, 59 ಲಕ್ಷ ಮಾತ್ರ. ಆದುದರಿಂದ ನಾವೀಗ ನಮ್ಮ ಮೂರನೇ ಪ್ಲಾನಿನಲ್ಲಿ ಹೊಸದಾಗಿ ಕೈಗೊಂಡ ಕೆಲಸಗಳೂ ಮತ್ತು ಹಿಂದಿನ ಬಾಕಿ ನಿಂತಿರುವ ಕೆಲಸಗಳು ಒಟ್ಟು ಎಷ್ಟು ಹೆಚ್ಚಿದ ಕೆಲಸಗಳಿಗೂ ಹಾಗೇ ಉಳಿದಿವೆ ಎಂದರೆ: 137 ಕೋಟಿ, 18 ಲಕ್ಷ ರೂಪಾಯಿಗಳ ಕೆಲಸ ಈ ಮೂರನೇ ಪ್ಲಾನಿನಲ್ಲಿ ಮುಗಿಸಬೇಕಾಗಿದೆ. ಈ ಕೆಲಸಗಳೆಲ್ಲಾ ಮುಗಿಯುವ ಹೊತ್ತಿಗೆ ಇನ್ನೂ 10-15 ಲಕ್ಷ ರೂಪಾಯಿಗಳು ಇದಕ್ಕೆ ಬೇಕಾಗಬಹುದು. ಇದಾದನಂತರ ನಮ್ಮ ನಾಲ್ಕನೇ ಪ್ಲಾನಿಗೆ ಸುಮಾರು 116 ಕೋಟಿ ರೂಪಾಯಿಗಳು ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ. ಹೀಗೆ ಈ ನಾಲ್ಕನೇ ಪ್ಲಾನಿನ ಮತ್ತು ಹಿಂದಿನ ಮೂರು ಯೋಜನೆಗಳಲ್ಲಿ ಉಳಿದ ಕೆಲಸ ಇಷ್ಟೆಲ್ಲವನ್ನೂ ಮುಗಿಸಬೇಕಾದರೆ ನಮಗೆ ಒಂದು 116 ಕೋಟಿ ಬೇಕಲ್ಲದೆ, ಮತ್ತು ಒಂದು 130 ಕೋಟಿ ಬೇಕಾದರೆ ಇಷ್ಟು ದುಡ್ಡು ಬೇಕಾಗುತ್ತದೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸ್ಪಿಲ್ ಓವರ್ ಆಗತಕ್ಕ ಹಣ ಸುಮಾರು 115-120 ಕೋಟಿ ಆಗುತ್ತದೆ. ಹೀಗೆ ಈ ಎಸ್ಟಿಮೇಟೆಡ್ ಕೆಲಸಗಳೆಲ್ಲಾ ಮುಗಿದು ಮುಂದೆ ಡೆವಲಪ್‌ಮೆಂಟರ್ ಕೆಲಸಗಳಿಗೆ ದುಡ್ಡು ಎಷ್ಟು ಖರ್ಚಾಗಬಹುದು ಎಂಬುದನ್ನು ಲೆಕ್ಕ ಹಾಕಿ ಅದು ಎಷ್ಟು ಪರ್ಸೆಂಟಿಗೆ ಬರುತ್ತದೆ ಎಂಬುದನ್ನು ಹೇಳುತ್ತೇನೆ. ಇಷ್ಟೆಲ್ಲಾ ನಮ್ಮ ನೀರಾವರಿ ಕೆಲಸಗಳು ಮುಗಿದಾಗ್ಯೂ, ನಾವು ಈಗಾಗಲೇ ಕೃಷ್ಣಾ ನದಿಯಲ್ಲಿ 340 ಟಿ. ಎಂ. ಸಿ. ಎಫ್. ಟಿ. ನೀರು ಬುಕ್ ಮಾಡಿದ್ದೇವೆ; ಇದೂ ಮತ್ತು ಅಪ್ಪರ್ ಕೃಷ್ಣ ಒಂದೇ ಸ್ಪೇಜ್ ಸೇರಿ ನಮಗೀಗ 116 ಕೋಟಿ ರೂಪಾಯಿಗಳು ಬೇಕಾಗಿದೆ. ಈ ಮಧ್ಯೆ ಕೇಂದ್ರದವರು ನಮಗೊಂದು ಆದೇಶವನು ಕೊಟ್ಟು ನಾವು 1975ರೊಳಗಾಗಿ 600 ಟಿ.ಎಂ.ಸಿ.ಎಫ್.ಟಿ. ನೀರನ್ನು ಉಪಯೋಗ ಮಾಡಿಕೊಳ್ಳಲೇಬೇಕೆಂದು ತಿಳಿಸಿದ್ದಾರೆ. ಇನ್ನೂ ಅವರ ಜೇಬಿನಲ್ಲಿ ನಮ್ಮ ಪಾಲಿನ ನೀರನ್ನು ಇಟ್ಟುಕೊಂಡಿರುತ್ತಾರೆ. ನಮಗಿನ್ನೂ ನೀರು ಸಾಲದು ಎಂಬ ಪರಿಸ್ಥಿತಿ ಬಂದಾಗ ಅವರು ನಮಗೆ ಆ ನೀರನ್ನು ಕೊಟ್ಟೇ ತೀರಬೇಕಾಗುತ್ತದೆ. ಅದನ್ನು ಕೇಳಿ ತೆಗೆದುಕೊಳ್ಳುವುದಕ್ಕೆ ನಮಗೆ ಹಕ್ಕೂ ಸಹ ಇದೆ. ಈ ಹಿಂದೆ ಇದೇ ಮಾನ್ಯ ಸಭೆಯಲ್ಲಿ ಕೆಲವು ಮಾನ್ಯ ಸದಸ್ಯರು 600 ಟಿ.ಎಂ.ಸಿ.ಎಫ್.ಟಿ. ನೀರನ್ನು ತೆಗೆದುಕೊಂಡು ಹೀಗೆ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ನೀವೆಂಥಾ ಹೇತುಗಳು ಎಂದು ಟೀಕೆ ಮಾಡಿದ್ದಾರೆ. ಆದರೆ ಹಾಗೆ ನಮ್ಮ ಪಾಲಿಗೆ ಬರತಕ್ಕದ್ದನ್ನು ಬೇಡ ಬಾರದೆಂದು ನಾವೂ ಕೂಡ ಹೇಳುವುದಿಲ್ಲ. ಬೇಡವೆಂದರೂ ಬೇಕಾಗಿ ಬರಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಕೃಷ್ಣ ನದೀ ನೀರಿನಲ್ಲಿ ನಿಮಗೆಷ್ಟು ನೀರು ದೊರೆಯಬೇಕೋ ಅಷ್ಟನ್ನೂ ನೀವು ತೆಗೆದುಕೊಳ್ಳುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನೇ ನಾನೀಗ ತಮಗೆಲ್ಲಾ ತಿಳಿಸಲು ನಿಂತಿದ್ದೇನೆ. ಇದನ್ನು ನಾವೂ ನೀವೂ ಎಲ್ಲರೂ ವಿಚಾರ ಮಾಡಬೇಕಾಗಿದೆ. ಈಗ ನಾವು 240 ಟಿ.ಎಂ.ಸಿ.ಎಫ್.ಟಿ. ನೀರನ್ನು ಉಪಯೋಗಿಸಲು ಎಷ್ಟು ದುಡ್ಡನ್ನು ಖರ್ಚು ಮಾಡಬೇಕೆಂಬುದನ್ನು ಈಗ ವಿಚಾರ ಮಾಡಬೇಕಾಗಿದೆ. 240 ಟಿ.ಎಂ.ಸಿ.ಎಫ್.ಟಿ. ನೀರನ್ನು ನಾನೇನು ಈಗ ಬುಕ್ ಮಾಡಿದ್ದೇವೆ ಇದನ್ನು 12 ವರ್ಷಗಳಲ್ಲಿ ಡ್ಯಾಂ, ಧಾನ್ಯ ಇತ್ಯಾದಿಗಳನ್ನೆಲ್ಲಾ ಕಟ್ಟಿ ಉಪಯೋಗ ಮಾಡಿಕೊಳ್ಳಬೇಕಾಗಿದೆ. ನಾವು ಒಂದು ಟಿ.ಎಂ.ಸಿ.ಎಫ್.ಟಿ. ನೀರನ್ನು ಕನ್‌ಸೂಂ ಮಾಡಬೇಕಾದರೆ 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ನಾನೀಗ ಡೆವಲಪ್‌ಮೆಂಟಲ್

ಖರ್ಚುಗಳನ್ನು ಬಿಟ್ಟು ಹೇಳುತ್ತಿದ್ದೇನೆ, ಹೀಗೆ ನಾವು 240 ಟಿ.ಎಂ.ಸಿ ಎಫ್.ಟಿ. ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕಾದರೆ ನಾವು ಈಗ 130 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ಈಗ ನಮಗೆ ಆ ಕೃಷ್ಣಾನದೀ ನೀರನ್ನು ಉಪಯೋಗ ಮಾಡಿಕೊಳ್ಳಲು 130 ಕೋಟಿ ರೂಪಾಯಿಗಳು ಬೇಕು. ನಾನಾಗಲೇ ಹೇಳಿದ ಒಂದು 116 ಕೋಟಿ. ಈ ಒಂದು 130 ಕೋಟಿ ಹೀಗೆ ನಮಗೀಗ ಒಟ್ಟು 246 ಕೋಟಿ ರೂಪಾಯಿಗಳು ಬೇಕಾಗಿದೆ. ಇದರ ಜೊತೆಗೆ ನಾವು ಕಾವೇರಿ ನದೀ ನೀರಿನಲ್ಲಿ ಬೇರೆ ಸುಮಾರು 100 ಟಿ.ಎಂ.ಸಿ.ಎಫ್.ಟಿ. ನೀರನ್ನು 1924ನೇ ಅಗ್ರೀಮೆಂಟಿನ ಪ್ರಕಾರ ಅವರು ಬಳಸಿರತಕ್ಕ 45 ಟಿ.ಎಂ.ಸಿ ಎಫ್.ಟಿ. ನೀರಿನಲ್ಲೆ ಶೇಕಡ 60ರಷ್ಟನ್ನು ಸೇರಿಸಿದರೆ ನಮಗೆ ಸುಮಾರು 90-95 ಟಿ.ಎಂ.ಸಿ.ಎಫ್.ಟಿ. ನೀರು ದೊರೆಯುತ್ತದೆ. ಈ ನೀರನ್ನು ನಾವು ಬಳಸಲು ಈಗಾಗಲೇ 8 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಪ್ರಯತ್ನ ಮಾಡಿದ್ದೇವೆ. ಹೀಗೆ ನಮಗೆ ಈಗ ಸುಮಾರು 300 ಕೋಟಿ ರೂಪಾಯಿನ ಹಣದ ಅಗತ್ಯ ತ್ವರಿತವಾಗಿದೆ. ನಾವು ಇಷ್ಟು ಹಣವನ್ನೂ 1975ರೊಳಗಾಗಿ ಖರ್ಚು ಮಾಡಬೇಕಾಗಿದೆ. ಇದನ್ನೆಲ್ಲಾ ನಾವು ಲೆಕ್ಕಹಾಕಿ ನೋಡುವುದಾದರೆ ನಮಗೆ ನಮ್ಮ ಹಕ್ಕಿನ ನೀರನ್ನು ಬಳಸಲು ಸಾಧ್ಯವಾಗುತ್ತದೆಯೇ ಎಂಬ ಅನುಮಾನ ಬಂದಿದೆ.

ಈ ಪ್ರಸಂಗದಲ್ಲಿ ಲೀಗಲ್ ಪಾಯಿಂಟುಗಳೇನು ಎನ್ನುವುದಕ್ಕೆ ಹೋಗುವುದು ಬೇಡ. ಈಗ ನಾವು ಕೃಷ್ಣಾ ನೀರಿನಲ್ಲಿ 600 ಟಿ.ಎಂ.ಸಿ.ಯಷ್ಟು ಎಂದು ಏನು ಕೊಟ್ಟಿದ್ದಾರೆ ಅದನ್ನು ಐದನೇ ಪಾಂಚ ವಾರ್ಷಿಕ ಯೋಜನೆಯಲ್ಲಿ ಅಭಿವೃದ್ಧಿ ಮಾಡಿಕೊಂಡು ಬನ್ನಿ ಹಾಗೆ ಅಭಿವೃದ್ಧಿ ಮಾಡಲು ನಮ್ಮ ಹೆಸರನ್ನು ರಿಜಿಸ್ಟರು ಮಾಡಿ, ರಿಸರ್ವನ್ನಲ್ಲಿಡಿ ಎಂದು ಹೇಳುವುದು ಅಷ್ಟು ಸರಿ ಕಾಣುವುದಿಲ್ಲ. ಇದೀ ರಾಷ್ಟ್ರದಲ್ಲಿ ನಮ್ಮದೊಂದೇ ರಾಷ್ಟ್ರವಲ್ಲ. ಯೋಜನೆಯನ್ನು ಅಭಿವೃದ್ಧಿ ಮಾಡಿಕೊಳ್ಳದೇ ನಮ್ಮ ಶಕ್ತಿಯನ್ನು ಬೆಳೆಸಿಕೊಳ್ಳದೇ ಯಾವ ಒಂದು ವ್ಯವಸ್ಥೆಯನ್ನೂ ಮಾಡದೆ ನಾವು ಉಪಯೋಗ ಮಾಡುವುದಕ್ಕಾಗದು ಎನ್ನುವುದಿಲ್ಲ. ಆಂಧ್ರದವರು ಬೇಕಾದಷ್ಟು ದುಡ್ಡು ಖರ್ಚು ಮಾಡಲು ಅವರಲ್ಲಿ ಶಕ್ತಿಯೂ ಇದೆ. ಆಂಧ್ರದಂತೆ ನಮ್ಮಲ್ಲಿಯೂ ಶಕ್ತಿಯನ್ನು ಬೆಳೆಸಬೇಕು. ನಮ್ಮ ನಮ್ಮ ರಿಸೋರ್ಸುಗಳನ್ನೂ ಬೆಳೆಸಬೇಕು. ನಮ್ಮ ಯೋಜನೆಗಾಗಿ ಕೇಂದ್ರದವರಬಳಿ ಹೋದಾಗ ಹತ್ತ ಕೋಟಿ ರೂಪಾಯಿಗಳಷ್ಟು ಬೇಕೆಂದು ಕೇಳಿದಾಗ ನಾಲ್ಕು ಕೋಟಿ ಕೊಟ್ಟು, ಇನ್ನು ಆರು ಕೋಟಿ ಯಷ್ಟನ್ನು ಪಡೆಯಲು ಹೋದಾಗ ನಿಮ್ಮಲ್ಲಿರುವ ರಿಸೋರ್ಸುಗಳನ್ನು ಹೆಚ್ಚು ಮಾಡಿ ಎಂದು ಹೇಳಿದರು. ಹೀಗೆ ಪ್ರತಿಯೊಂದು ಡ್ಯಾಮನ್ನು ಕಟ್ಟುತ್ತೇವೆ ಎಂದು ಕೇಳುವುದು ಸರಿಯಾಗುವುದಿಲ್ಲ. ಅದರೂ ಎಲ್ಲ ಜನರ ಒಪ್ಪಿಗೆಯಂತೆ ನಾವೂ ನೀರಿಗಾಗಿ ಕಾಳಿತು ವಿಚಾರ ಮಾಡೋಣ. ನಮ್ಮ ಸ್ಟೇಟಿಗೆ ದುಡ್ಡು ಹೆಚ್ಚಾಗಿ ಕೊಡಬೇಕೆಂದು ಕೇಳಿದರೆ ಬಾಕಿ ಇನ್ನೊಂದು ಸ್ಟೇಟಿನವರೂ ಕೇಳಬಹುದು. ಇಷ್ಟು ಹೇಳಿದರೂ ತಾವು ಕನ್‌ವಿನ್ಸು ಆಗಲು ತಯಾರಾಗಿಲ್ಲ ಎಂದರೆ ನಾನೇನು ಹೇಳುವುದು. ಈ ಪ್ರಾಬ್ಲಂ ಅಷ್ಟು ದೊಡ್ಡದು. ನೂರಾರು ಕೋಟಿಯಷ್ಟು ಹಣ ಬೇಕೆನ್ನುವಾಗ ಇದನ್ನು ಯಾವ ರೀತಿ ಪಡೆಯಬೇಕು ಎನ್ನುವುದು ಬಹು ಮುಖ್ಯವಾದ ವಿಚಾರ. ನಮ್ಮ ಹಿಂದೂಸ್ತಾನದಲ್ಲಿ ವೈ ನೂರು ರ ಜ ವೊಂದಕ್ಕೇ ಹಣವನ್ನು ಸುರಿಯಿರಿ ಎಂದು ಕೇಳುವುದೂ ಸರಿಯಲ್ಲ.

ಶ್ರೀ ಸಿ. ಜೆ. ಪಾಯಕ್ಕಣ್ಣಪ್ಪ.—ನಿಮಗೆ ಕೃಷ್ಣಾ, ಮಲಪ್ರಭಾ ಮತ್ತು ಘಟಪ್ರಭಾ ಇಂತಹ ಯೋಜನೆಗಳಿಗೆ ದುಡ್ಡು ಕೊಡುವುದಕ್ಕೆ ಆಗುವುದಿಲ್ಲ ಎಂದರೆ ಇವು ಬ್ಯಾಕ್‌ವರ್ಡ್ ಏರಿಯಾದಿಂದ ಬಂದವು ಎಂದು ಇದನ್ನು ಇಂಬ್ಯಾರಸ್ಸು ಮಾಡಬೇಕೋ ಇಲ್ಲವೋ?

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳಿದ ಪ್ರಶ್ನೆಯನ್ನು ತಾವು ತಿಳಿದುಕೊಳ್ಳಲಿಲ್ಲ. ದುಡ್ಡಿನ ವಿಷಯಕ್ಕೆ ಯಾವ ರೀತಿಯಾಗಿ ಮಾಡುವುದಕ್ಕೆ ಸಾಧ್ಯ ಎನ್ನುವುದರ ಬಗ್ಗೆ ನಾವೂ ಮತ್ತು ನೀವೂ ಕುಳಿತು ವಿಚಾರ ಮಾಡೋಣ. ದುಡ್ಡು ಎಷ್ಟು ಬೇಕಾಗುತ್ತದೆ ಎನ್ನುವುದನ್ನು ಮೊದಲು ತಿಳಿದುಕೊಳ್ಳಬೇಕು. ಈ ರೀತಿಯಿಂದ ನಮಗೆ ಸುಮಾರು 300 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದರಲ್ಲಿ ಶೇಕಡಾ 26ರಷ್ಟು ಡೆವಲಪ್‌ಮೆಂಟಿಗಾಗಿ ನಾವು ಕೊಡಬೇಕಾಗಿದೆ. ನಮ್ಮಲ್ಲಿರುವ ಸುಮಾರು 380 ಲಕ್ಷ ಎಕರೆಯಷ್ಟು ಭೂಮಿಗೆ 22 ಲಕ್ಷ ಎಕರೆಗಳಷ್ಟಕ್ಕೆ ನೀರು ಕೊಟ್ಟಾಗಿದೆ. ಯಾರು ಈ ನೀರಿನ ಸುಖವನ್ನು ಪಡೆದು ಸಂತೃಪ್ತಿಗಳಿಂದ ಅನುಭವಿಸುತ್ತಿದ್ದಾರೋ ಅಂತಹವರು 328 ಲಕ್ಷ ಎಕರೆಯಷ್ಟು ಭೂಮಿ ಇರುವವರಿಗೂ ಸುಖವುಂಟುಮಾಡುವಂತೆ ಅವರು ಸ್ವಲ್ಪ ತಡಾಗ ಮಾಡಿ ಹೆಚ್ಚು ಹೆಚ್ಚಾಗಿ ಟ್ಯಾಕ್ಸುಗಳನ್ನು ಕೊಡಲು ತಯಾರಾಗಿರಬೇಕು.

ತಾವು ವಾಟರು ರೇಟು ಕೊಡುವಾಗ ಸರಾಸರಿ 50 ರೂಪಾಯಿ ಬರುತ್ತದೆ ಎಂದು ಲೆಕ್ಕ ಹಾಕಿತ್ತಿದ್ದಿರಿ. 50 ಸರಾಸರಿ ಬರುತ್ತದೆ ಎಂದರೆ ಡ್ರೈ ಕ್ರಾಪಾದರೆ 10, 15, 20ರವರೆಗೆ ಬರಬಹುದು. ಕಬ್ಬು ಬಂದರೆ 60 ರಿಂದ 70ರವರೆಗೆ ಹೋಗಬಹುದು. ಪಾಡೀ ಬಂದರೆ 30-35 ರೂಪಾಯಿವರೆಗೆ ಬರಬಹುದು. ಸರಾಸರಿ ಎಂದು ತೆಗೆದುಕೊಂಡರೆ 50 ರೂಪಾಯಿಗಳು ಎಂದು ಬರುತ್ತದೆ. ಬ್ರಿಜ್ ಕನ್‌ಸ್ಟ್ರಕ್ಷನ್ನನ್ನು ಒಂದು ಸಾವಿರಕ್ಕಿಂತ ಹೆಚ್ಚಾಗಿ ಆಗಕೂಡದು ಎಂದು

(ಶ್ರೀ ವೀರೇಂದ್ರ ಪಾಟೀಲ್)

ಇದೆ. ಇದರಲ್ಲಿ ಸ್ವಲ್ಪ ಹೆಚ್ಚುಕಡಿಮೆಯಾಗಬಹುದು. ಶೇಕಡಾ 80 ರಷ್ಟು ಎಂದು ಖರ್ಚಾಗುವಾಗ ಅದರಲ್ಲಿ ಶೇಕಡಾ 5ರಷ್ಟು ಬಡ್ಡಿಗಾಗಿ ಹೋಗುತ್ತದೆ. ಕೇಂದ್ರ ಸರಕಾರದಿಂದ ನಾವು ಸಾಲವನ್ನು ಶೇಕಡಾ ನಾಲ್ಕೂವರೆಯಂತೆ ತೆಗೆದುಕೊಂಡು ರೈತರಿಗೆ ಸಹಾಯ ಮಾಡುತ್ತಿದ್ದೇವೆ. ಇದರಲ್ಲಿ ನಮಗೆ ಶೇಕಡಾ 5 ರಂತೆ ಬಡ್ಡಿ ಬರುತ್ತದೆ. ಇನ್ನು ಮೇಂಟೇನು ಮಾಡಲು ಶೇಕಡಾ 5ರಷ್ಟು ಎಂದು ಹೋಗುತ್ತದೆ. ಇದರಿಂದ ಇದರ ಕಾಸ್ಟು ಅರ್ಧ ಪರ್ಸೆಂಟು ಕೂಡ ಬರುವುದಿಲ್ಲ. ನಮ್ಮ ಪ್ರಾಜೆಕ್ಟುಗಳ ಕನ್‌ಸ್ಟ್ರಕ್ಷನ್ನು ಎಷ್ಟಾರದಲ್ಲಿ ಏನಾಗಿದೆ ಎನ್ನುವುದನ್ನು ಎಷ್ಟರ ಮಾಡಿದರೆ ಅನೇಕ ಪ್ರಾಜೆಕ್ಟುಗಳನ್ನು ಕಟ್ಟಿದ್ದರೂ ಕೂಡ ಅವು ಇನ್ನೂ ಪೂರ್ತಿಯಾಗಿ ಡೆವಲಪ್ಪು ಆಗಿಲ್ಲ. ಉದಾಹರಣೆಗಾಗಿ ಕೆ. ಆರ್. ಎಸ್. ಪ್ರಾಜೆಕ್ಟನ್ನು ತೆಗೆದುಕೊಂಡರೆ ಇದರಲ್ಲಿ ಈಗ ಒಂದು ಲಕ್ಷದ ಹತ್ತು ಸಾವಿರ ಎಕರೆಗಳಷ್ಟು ಭೂಮಿ ಡೆವಲಪ್ಪು ಆಗಿದೆ. ಇಲ್ಲಿ ಯಾವ ರೀತಿಯಾಗಿ ಬೆಳೆಯನ್ನು ಬೆಳೆಯುತ್ತಿದ್ದಾರೆನ್ನುವುದು ತಮಗೆಲ್ಲರಿಗೂ ಗೊತ್ತಿದೆ. ಇನ್ನು ಸರಕಾರದವರು ಕೆ. ಆರ್. ಎಸ್. ಗಾಗಿ ಎಷ್ಟು ಖರ್ಚು ಮಾಡುತ್ತಿದ್ದಾರೆನ್ನುವುದರ ಅಂಕೆ ಅಂಶಗಳನ್ನು ನೋಡಿದರೆ ಪ್ರತಿ ವರ್ಷವೂ ಇದರ ಮೇಂಟೆನೆನ್ಸ್‌ಗಾಗಿ 40 ಲಕ್ಷದಷ್ಟು ಖರ್ಚು ಮಾಡುತ್ತಿದ್ದಾರೆ. ಇದಲ್ಲದೆ ಪ್ರತಿ ವರ್ಷವೂ ಬಡ್ಡಿಗಾಗಿ ಮೈನರು ರಿಪೇರಿಗಳಿಗಾಗಿ ಸುಮಾರು 40 ಲಕ್ಷದಷ್ಟು ಖರ್ಚಾಗುತ್ತಿದೆ. ಇದರಿಂದ ಬರುವ ರೆವೆನ್ಯೂ ಎಂದರೆ ವಾಟರು ರೇಟು 19.75 ಲಕ್ಷ, ಷೇರ್ ಆಫ್ ವಾಟರಿನಿಂದ 4.63 ಲಕ್ಷ, ರೆಂಟಿನಿಂದ 61 ಸಾವಿರ, ರಿಕವರಿ ಆಫ್ ರೋನ್ಸ್ ಎಂದು ಒಂದು ಲಕ್ಷ, ಮಿಸ್‌ಲೇನಿಯಸ್‌ಗಾಗಿ 1.41 ಲಕ್ಷ ಮತ್ತು Payment of Land Revenue arrears due to Ryots 1.66 ಲಕ್ಷ. ಹೀಗೆ ಒಟ್ಟು 28.86 ಲಕ್ಷದಷ್ಟು ಬರುತ್ತದೆ, ಹೀಗೆ ಪ್ರಾಜೆಕ್ಟುಗಳಿಂದ ಇಲ್ಲಿಯವರೆಗೆ ರೈತರು ಅನುಕೂಲಗಳನ್ನು ಪಡೆಯುತ್ತಿದ್ದಾರೆ. ಈ ರೈತರಿಂದ ಎಂದರೆ ಸುಮಾರು 328 ಲಕ್ಷ ಜನರಿಂದ ಅನುಕೂಲವಾಗುತ್ತಿರುವ ಪ್ರಾಜೆಕ್ಟುಗಳಿಗಾಗಿ 12 ಲಕ್ಷದಷ್ಟು ಮೇನ್‌ಟೆನೆನ್ಸ್‌ಗಾಗಿ ಖರ್ಚು ಮಾಡುತ್ತಾ ಹೋದರೆ ಬೇರೆ ಪ್ರಾಜೆಕ್ಟುಗಳಿಗೆ ದುಡ್ಡು ಎಲ್ಲಿಂದ ಬರಬೇಕು? ಪ್ರಾಜೆಕ್ಟುಗಳು ಆಗಿರುವುದರಲ್ಲಿ ನಮಗೆ ಲಾಭ ಬರಬೇಕು. ನಮಗೆ ಸರಿಯಾದ ರಿಟರ್ನು ಬಂದರೆ ಆ ದುಡ್ಡು ತೆಗೆದುಕೊಂಡು ಹೆಚ್ಚು ಹೆಚ್ಚಾಗಿ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳಬಹುದು. ಯಾವುದೇ ಒಂದು ಸಣ್ಣ ನೀರಾವರಿ ಕೆಲಸ ಮಾಡುವುದಕ್ಕೆ ಹೋಗಿ ಅಲ್ಲಿ ನೀರು ಬಂದಾಗ ಅಲ್ಲರುವ ಪ್ರತಿಯೊಬ್ಬರೂ ನೀರು ಬಂತೆಂಬ ಸಂತೋಷದಿಂದ ಕುಣಿದು ಸಂತೋಷಪಡುತ್ತಾರೆ. ರೈತರಿಗೆ ನೀರು ಎನ್ನುವುದು ಬಂಗಾರಕ್ಕಿಂತ ಹೆಚ್ಚಾದುದು ಎಂದು ಭಾವಿಸುತ್ತಾರೆ. ಎಲ್ಲೆಲ್ಲಿ ನೀರು ಬೇಕಾಗಿದೆಯೋ ಅಲ್ಲಿಗೆ ನೀರನ್ನು ಹೆಚ್ಚು ಹೆಚ್ಚಾಗಿ ಒದಗಿಸಿ ಕೊಡಬೇಕು. ಯಾವ ರೀತಿಯಾಗಿ ಮಂಡ್ಯ ಮತ್ತು ಮೈಸೂರು ಜಿಲ್ಲೆಯ ಜನರು ಸುಖ ಸಂಪತ್ತುಗಳಿಂದ ಇದ್ದಾರೋ ಅದೇ ರೀತಿ ದೇಶದ ಎಲ್ಲಾ ರೈತರಿಗೆ ಅನುಕೂಲವಾಗುವಂತೆ ಮಾಡಬೇಕು. ಅದಕ್ಕೆ ತಕ್ಕಂತಹ ಪ್ರಾಜೆಕ್ಟುಗಳನ್ನು ಮಾಡಿ ಕೊಡಬೇಕು. ನಾವು ಈಗಾಗಲೇ ತೆಗೆದುಕೊಂಡಿರುವ ಸಾಲಕ್ಕೆ ಸುಮಾರು 10-15 ಲಕ್ಷ ರೂಪಾಯಿಗಳನ್ನು ಬರೀ ಇಂಟರೆಸ್ಟಿಗಾಗಿ ಕೊಡುತ್ತಾ ಹೋಗುತ್ತಿದ್ದೇವೆ. ಸುಮಾರು 80-85 ಕೋಟಿಯಷ್ಟು ಸಾಲ ಪಡೆದಿರುವುದಕ್ಕೆ ಸುಮಾರು 5—6 ಕೋಟಿಯಷ್ಟು ಬಡ್ಡಿಗಾಗಿಯೇ ಕೊಡ ಲಾಗುತ್ತಿದೆ. ಹೀಗಿರುವಾಗ ಹಾರಂಗಿ, ಕಂಬದ ಕತೆ ಪ್ರಾಜೆಕ್ಟು ಆಗಬೇಕು, ಅಪ್ಪರ್ ಕೃಷ್ಣಾ ಆಗ ಬೇಕು, ಮಲಪ್ರಭಾ ಹಾಗೂ ಘಟಪ್ರಭಾ ಎನ್ನುವಂತಹ ಕಟ್ಟೆಗಳನ್ನು ಕಟ್ಟಲು ನಮಗೆ ದುಡ್ಡು ಎಲ್ಲಿಂದ ಬರಬೇಕು? ಈಗೊತ್ತು ಒಂದು ಕಡೆ ಎಮರ್ಜೆನ್ಸಿ ಮತ್ತು ಮೇಜರು ಇರಿಗೇಷನ್ನು ಎನ್ನುವ ಸಮಸ್ಯೆ ಬಹಳ ದೊಡ್ಡದಾದುದು. ಇನ್ನೊಂದು ಕಡೆ ಮೈನರು ಇರಿಗೇಷನ್ನಿಗೆ ಸಹಾಯ ಮಾಡಿದರೆ ಎಷ್ಟೋ ಜನರಿಗೆ ಲಾಭ ಸಿಗುತ್ತದೆ. ವರ್ಷದ ಪೂರ್ತಿ ಕಾಲ ಜನರಿಗೆ ಅನುಕೂಲವಾಗುತ್ತದೆ ಎಂದು ಮೈನರು ಇರಿಗೇಷನ್ನಿಗಾಗಿ ಹೆಚ್ಚು ಗಮನವನ್ನು ಕೊಡಬೇಕೆಂದು ಕೆರೆ ಕಟ್ಟೆಗಳಲ್ಲಿ ಡೀಸಿಲ್ಟು ಮಾಡಬೇಕು, ಹೂಳು ತೆಗೆಸಬೇಕು ಎಂದು ನಮ್ಮ ದೇಶದಲ್ಲಿ ತುರ್ತು ಪರಿಸ್ಥಿತಿ ಬಂದ ಮೇರೆ ಆಹಾರ ಹೆಚ್ಚಾಗಿ ಬೆಳೆಯಬೇಕು ಮತ್ತು ಇದಕ್ಕಾಗಿ ಹೆಚ್ಚಿನ ಖರ್ಚು ಮಾಡಿ ದರಸು ಮಾಡಬೇಕೆಂದು ಈಗಾಗಲೇ ಖರ್ಚು ಮಾಡಿದ್ದೇವೆ. ಮೂರನೆ ಯೋಜನೆಯಲ್ಲಿ ಕೆರೆಗಳಿಗಾಗಿ ಸುಮಾರು ಎಂಟೂವರೆ ಕೋಟಿಯಷ್ಟು ಕೊಡಲಾಗಿದೆ ಈಗಲೂ ಸಹ ನಮ್ಮಲ್ಲಿ ಸುಮಾರು 16 ಕಲಸಗಳ ಅಂದಾಜು ಪ್ಲಾನ್‌ಗಳು ಸಿದ್ಧವಾಗಿವೆ ಇದರ ಬಗ್ಗೆ ಹೆಚ್ಚು ಕೆಲಸ ಮಾಡಿರುವುದು ನಮ್ಮ ಮೈಸೂರು ಸ್ಟೇಟಿನಲ್ಲಿ ಎಂದು ತಿಳಿದು ಕೇಂದ್ರದವರು ಮೊದಲು ಇದಕ್ಕಾಗಿ 3 ಕೋಟಿ ಕೊಟ್ಟಿದ್ದರು. ಮತ್ತೆ ಈ ವರ್ಷ ಕೂಡ ಇನ್ನೂ ಎರಡು ಕೋಟಿಯಷ್ಟು ಕೊಟ್ಟಿರುತ್ತಾರೆ.

ಇವತ್ತು ಮೈನರ್ ಇರಿಗೇಷನ್ನಿನಲ್ಲಿ 38 ಸಾವಿರ ಕೆರೆಗಳಿವೆ. ಇವುಗಳಲ್ಲಿ 10 ಎಕರೆ ಮತ್ತು ಅದಕ್ಕಿಂತ ಕಡಮೆ ಅಚ್ಚುಕಟ್ಟು ಇರುವ ಕೆರೆಗಳನ್ನೆಲ್ಲ ತಾಲ್ಲೂಕು ಬೋರ್ಡಿಗೆ ವಹಿಸಿದ್ದೇವೆ. ಇದಲ್ಲದೆ

23 ಸಾವಿರ ಕೆರೆಗಳು ಇರುತ್ತವೆ. ಈ ಕೆರೆಗಳೆಲ್ಲ ರೆವೆನ್ಯೂ ಇಲಾಖೆಯ ಅಧೀನದಲ್ಲವೆ, ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿಲ್ಲ. ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿರುವುದು 180 ಕೆರೆಗಳು ಮಾತ್ರ.

ಹಳೆಯ ಮೈಸೂರು ಭಾಗದಲ್ಲಿ ಕೆರೆಕಟ್ಟೆಗಳ ದುರಸ್ತಿ ಮತ್ತು ಮೇಂಟನೆನ್ಸ್ ಕೆಲಸವನ್ನು ರೈತರೇ ಮಾಡಿಕೊಳ್ಳುತ್ತಿದ್ದರು. ಈಚೆಗೆ ಅವರು ಸಾಕಷ್ಟು ಮನಸ್ಸು ಮಾಡಲಿಲ್ಲ. ಇದರಿಂದ ಏನಾಗಿದೆ ಎಂದರೆ ಇವತ್ತು ನೂರಕ್ಕೆ 50ರಷ್ಟು ಕೆರೆಗಳು ಸರಿಯಾದ ವ್ಯವಸ್ಥೆಯಲ್ಲಿಲ್ಲ; disrepair ನಲ್ಲಿವೆ. ಮಿನಿಮಂ ರಿಪೇರಿ ಮಾಡಬೇಕಾದರೂ ಬಹಳ ದುಡ್ಡು ಖರ್ಚಾಗುತ್ತದೆ. ನಾನು ಅನೇಕ ಕಡೆ ಹೋಗಿ ಕೆರೆಗಳ ಸ್ಥಿತಿಯನ್ನು ನೋಡಿದ್ದೇನೆ. ಅನೇಕ ಕೆರೆಗಳು ಹೂತು ಹೋಗಿವೆ, ಕಾಲುವೆಗಳೆಲ್ಲ ಒಡೆದು ಹೋಗಿವೆ, ತೂಬು ಸಹ ಒಡೆದು ಹೋಗಿದೆ. ಸರಿಯಾಗಿ ನೋಡಿದರೆ 11 ಲಕ್ಷ ಎಕರೆಗಳಲ್ಲಿ ನಾಲ್ಕೈದು ಲಕ್ಷ ಎಕರೆ ಕೂಡ ನೀರಾವರಿ ಕೆಳಗೆ ಬರುವುದಿಲ್ಲ. ಅನೇಕ ಕೆರೆಗಳ ಕೆಳಗೆ ನೂರು ಎಕರೆ ಅಚ್ಚುಕಟ್ಟು ಇದ್ದರೆ ನೀರು ಬರುವುದು 15-20 ಎಕರೆಗೆ ಅಗುವಷ್ಟು ಮಾತ್ರ. ಕೆರೆಗಳೆಲ್ಲ ಹೂಳು ತುಂಬಿವೆ. ಹೂಳನ್ನು ತೆಗೆಯುವುದಕ್ಕೆ ಸಾಧ್ಯವಿಲ್ಲ. ಇದು ಸಣ್ಣಪುಟ್ಟ ಕೆಲಸವಲ್ಲ. ಇವತ್ತು ನಮ್ಮಲ್ಲಿ ವೆ ೀಂಟನೆನ್ಸ್ ಸಲುವಾಗಿ ಸಿಬ್ಬಂದಿಯನ್ನು ಇಟ್ಟುಕೊಂಡಿದ್ದೇವೆ. ಪ್ರತಿ ವರ್ಷ ಕೆರೆಗಳನ್ನು ಮೇಂಟೇನ್ ಮಾಡಬೇಕು ಎಂದು 50, ಸಿವಿಲ್ ವರ್ಕ್ಸ್‌ನಲ್ಲಿ ಸಾಕಷ್ಟು ದುಡ್ಡನ್ನು ಒದಗಿಸಿಕೊಂಡಿದ್ದೇವೆ. ಕೆರೆಗಳನ್ನು ನೋಡಿಕೊಳ್ಳಲು ರೆವೆನ್ಯೂ ಇಲಾಖೆಯವರು ನೀರಗಂಟಿಗಳನ್ನು ಇಟ್ಟುಕೊಂಡಿದ್ದರು. ಇನ್ನು ಮುಂದೆ ಅವರಿಗೆ ದುಡ್ಡು ಕೊಡುವುದಕ್ಕೆ ಏನು ಮಾಡುತ್ತೀರಿ ಎಂದು ಕೇಳಿದರು. 50 ಲಕ್ಷ ರೂಪಾಯಿಗಳನ್ನು 41, ಐ ಎನ್.ಇ.ಡಿ.ನಲ್ಲಿ ಒದಗಿಸಿಕೊಂಡಿದ್ದೇವೆ, ಮೇಜರ್ ರಿಪೇರ್ಸ್ ಎಂದರೆ ಪ್ರವಾಹ ಬಂದು ಕೆರೆಗಳು ಒಡೆದು ಹೋದರೆ ಅಂಥ ಕೆಲಸಗಳನ್ನು ಮಾತ್ರ ಈ ದುಡ್ಡಿನಿಂದ ಮಾಡುತ್ತೇವೆ. ಸಣ್ಣಪುಟ್ಟ ಕೆಲಸಗಳನ್ನು ಮಾಡುವುದಕ್ಕೆ ದುಡ್ಡಿಲ್ಲ. ಅದಕ್ಕೆ ದುಡ್ಡು ಸಾಕಾಗುವುದಿಲ್ಲ. ಅದರ ಸಲುವಾಗಿ ನಾವು ವಿಚಾರ ಮಾಡಿದ್ದು ಏನೆಂದರೆ 23 ಸಾವಿರ ಕೆರೆಗಳನ್ನು ಪಿ.ಡಬ್ಲ್ಯು.ಡಿ.ಯವರು ವಹಿಸಿಕೊಂಡರೆ ಯಾವರೀತಿ ಅವುಗಳ ನಿರ್ವಹಣೆ ಮಾಡಬೇಕು ಎಂದು ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡುವುದಕ್ಕೆ ಅವಕಾಶವನ್ನು ಇಟ್ಟುಕೊಂಡಿದ್ದೇವೆ. ಅದೇರೀತಿ ನೀರಗಂಟಿಗಳನ್ನು ಇಟ್ಟುಕೊಂಡರೆ ನೀರು ರೆಗ್ಯುಲೇಟ್ ಮಾಡುವುದಕ್ಕೆ, ತೂಬು, ನಾರೆ, ಕೆರೆಕಟ್ಟೆ ಇವನ್ನೆಲ್ಲ ಸರಿಯಾದ ರೀತಿಯಲ್ಲಿ ದುರಸ್ತಿ ಮಾಡುವುದಕ್ಕೆ ಹಣ ಬೇಕಾಗುತ್ತದೆ ಎಂದು ಎಕರೆಗೆ ಐದು ರೂಪಾಯಿಗಳನ್ನು ಮೇಂಟೆನೆನ್ಸ್ ಸೆಸ್ ಎಂದು ಹಾಕುತ್ತೇವೆ. ಇದೂ ಕೂಡ ಕಡಮೆಯಾಗುತ್ತದೆ ಎಂದು 44—ಐ.ಎನ್.ಇ.ಡಿ.ನಲ್ಲಿರುವ ದುಡ್ಡನ್ನೂ ಸೇರಿಸಿ ಇದಕ್ಕಾಗಿ ಖರ್ಚ ಮಾಡಬೇಕಾಗುತ್ತದೆ. ಆದುದರಿಂದ ತಾವೆಲ್ಲರೂ ಇದನ್ನು ಸ್ವಾಗತಿಸುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ.

ಈ ರೀತಿಯಾಗಿ ಇವತ್ತು ನೀರಾವರಿ ಯೋಜನೆಗೆ ಸಂಬಂಧಪಟ್ಟಂತೆ ಸಮಸ್ಯೆ ಎಷ್ಟು ದೊಡ್ಡ ದಾಗಿದೆ, ನಾವು ಈ ಸಮಸ್ಯೆಯನ್ನು ಎದುರಿಸಲು ಎಷ್ಟು ದೊಡ್ಡ ತ್ಯಾಗ ಮಾಡಬೇಕಾದ ಪ್ರಸಂಗ ಏದೆ ಎನ್ನುವುದನ್ನು ಸ್ವಲ್ಪವಾದರೂ ತಮ್ಮ ಮುಂದೆ ನಾನು ಅಂಕಿ ಸಂಖ್ಯೆಗಳಿಂದ ಹೇಳಿದ್ದೇನೆ. ಈ ಬಿಲ್ಲಿನ ಅನೇಕ ಪ್ರಾವಿಷನ್‌ಗಳ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಲಿಲ್ಲ. ಕೆಲವರು ಸ್ವಾಗತ ಮಾಡಿದ್ದಾರೆ, ಕೆಲವರು ಯಾವ ಯಾವ ಸಲಹೆಗಳನ್ನು ಹೇಳಿದ್ದಾರೆಯೋ ಅವುಗಳನ್ನೆಲ್ಲ ಸೆಲೆಕ್ಟ್ ಕಮಿಟಿಯವರು ಕೂಲಂಕಷವಾಗಿ ವಿಚಾರ ಮಾಡಿ ಒಂದು perfect legislation ತಮ್ಮ ಮುಂದೆ ತರುವುದಕ್ಕೆ ಸಹಾಯ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇಷ್ಟು ಹೇಳಿ ತಾವೆಲ್ಲರೂ ಇದಕ್ಕೆ ಸ್ವಾಗತ ನೀಡಿದ್ದಕ್ಕಾಗಿ ತಮ್ಮೆಲ್ಲರಿಗೂ ಧನ್ಯವಾದಗಳನ್ನರ್ಪಿಸಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

Mr. SPEAKER.—The question is :

"That the Mysore Irrigation Bill, 1963, be taken into consideration."

The motion was adopted.

Motion to refer to Joint Select Commi

Sri VEERENDRA PATIL.—Sir, I beg to move :

"That the Mysore Irrigation Bill, 1963 be referred to a Joint Select Committee consisting of a total number of 20 members,

(SRI VEERENDAR PATIL)

15 members from the Legislative Assembley, 5 members from the Legislative Council and that the concurrence of the Legislative Council be obtained therefor and that the following members of this House shall be members of the Joint Select Committe, *viz.*—

Sriyuths—

1 Alur Hanumanthappa
2 B. Bhaskar Shetty
3 C. M. Revanasiddaiah
4 G. Rame Gowda
5 K H. Ranganath
6 C. J Muckannappa
7 Thirumala Deva Raya
8 G. N. Desai
9 N. A. Karilingannavar
10 T. Madiah Gowda
11 S. S. Kolkebail
12 Smt Annapurna Bai Ragate
13 Smt. Yellawa Sambrani
14 Sri M. Y. Ghorpade
15 N. Hutchmasthy Gowda"

Mr. SPEAKER.– The question is:

"That the Mysore Irrigation Bill, 1963 be referred to a Joint Select Committee consisting of a total number of 20 members, 15 from the Legislative Assembly, 5 members from the Legislative Council and that the concurrence of the Legislative Council be obtained therefor and the following members of this House shall be members of the Joint Select Committee, *viz.*—

Sriyuts—

1 Alur Hanumanthappa
2 B. Bhaskar Shetty
3 C. M. Revanasiddaih
4 G. Ram Gowda
5 K. H. Ranganath
6 C. J. Muckannappa
7 Thirumala Deva Raya
8 G. N. Desai
9 N. A. Karilingannavar
10 T. Madiah Gowda
11 S. S. Kolkebail
12 Smt. Annapurna Bai Ragate

13 Smt. Yellava Sambrani
14 Sri M. Y. Ghorpade
15 Sri N. Huchamasthy Gowda "

The motion was adopted.

Mr. SPEAKER.—Under sub-rule (2) of rule 240 of the Rules of Procedure and Conduct of Business in the Mysore Legislative Assembly, I nominate the Minister in charge of the the Department, namely the Minister for Public Works and the Minister for Law as Members of the Joint Select Committee.

THE MYSORE COTTON CONTROL BILL, 1963

Motion to consider.

Sri G. NARAYANA COWDA (Minister for Agriculture).—Sir, I beg to move:

"That the Mysore Cotton Control Bill, 1963 be taken into consideration."

Mr. SPEAKER.—Motion moved:

"That the Mysore Cotton Control Bill, 1963 be taken into consideration."

† ಶ್ರೀ ಜಿ. ನಾರಾಯಣ ಗೌಡ--.ಸ್ವಾಮಿ, ಈಗ ನಮ್ಮ ರಾಜ್ಯದೊಳಗೆ ಒಂದು ಏಕರೂಪವಾದ ಕಾನೂನು ನ್ನು ಮಾಡುವ ಉದ್ದೇಶದಿಂದ ಈ ಕಾಟನ್ ಕಂಟ್ರೋಲ್ ಬಿಲ್ಲನ್ನು ಇಲ್ಲಿ ಮಂಡಿಸಲಾಗಿದೆ. ಈಗಿರುವ ಹಾಗೆ ಬೊಂಬಾಯಿ ಕರ್ನಾಟಕದಲ್ಲಿ 1942ನೆ ಕಾಟನ್ ಕಂಟ್ರೋಲ್ ಆಕ್ಟ್ ಜಾರಿಯಲ್ಲಿದೆ. ಹಾಗೂ ಹೈದರಾಬಾದಿನಲ್ಲಿ ಫಸಲಿ 1337ರ ಕಾಟನ್ ಕಲ್ಟಿವೇಷನ್ ಮತ್ತು ಟ್ರಾನ್ಸ್‌ಪೋರ್ಟ್ ಆಕ್ಟ್ ಜಾರಿಯಲ್ಲಿದೆ. ಮದ್ರಾಸಿನೊಳಗೆ 1952ನೇ ಆಕ್ಟ್ ಜಾರಿಯಲ್ಲಿದೆ ಹಳೇ ಮೈಸೂರಿನಲ್ಲಿ ಮೈಸೂರು ಕಾಟನ್ ಕಂಟ್ರೋಲ್ ಆಕ್ಟ್ 1942 ಜಾರಿಯಲ್ಲಿದೆ. ಹೀಗೆ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಕಾನೂನು ಜಾರಿಯಲ್ಲಿರುವಾಗ ಏಕರೂಪವಾದ ಒಂದು ಕಾನೂನು ಆಗಬೇಕು. ಅದಕ್ಕೋಸ್ಕರವಾಗಿ ಮತ್ತು ಇಂಡಿಯಾ ಸರ್ಕಾರದವರು ಅನೇಕ ಬಾರಿ ಒಂದು ಏಕರೂಪವಾದ ಶಾಸನವನ್ನು ಮಾಡಿ ಎಂದೂ, ಹಾಗೂ ಸೆಂಟ್ರಲ್ ಕಾಟನ್ ಕಮಿಟಿಯವರು ಸಹಿತ ಇದನ್ನು ಪದೇ ಪದೇ ನಮಗೆ ಹೇಳುತ್ತ ಬಂದದ್ದರಿಂದ ಇವತ್ತಿನ ದಿವಸ ಏಕರೂಪವಾದ ಕಾನೂನನ್ನು ಮಾಡುವುದಕ್ಕೋಸ್ಕರ ಈ ಮಸೂದೆಯನ್ನು ಮಾನ್ಯಸಭೆಯ ಮುಂದೆ ಇಟ್ಟಿದ್ದೇನೆ. ಈ ಮಸೂದೆಯನ್ನು ತಂದಿರುವ ಉದ್ದೇಶ ನಮ್ಮ ಹತ್ತಿಯ ಕ್ವಾಲಿಟಿ ಮತ್ತು ಅದರ ಪರ್ಚೆಸ್ಯಿಜೇಷನ್ ಹೆಚ್ಚು ಮಾಡಬೇಕು, ಆ ರೀತಿಯಾಗಿ ಆದರಿಂದ ಹತ್ತಿ ಬೆಳೆಯುವವರಿಗೆ ಒಟ್ಟಿನಲ್ಲಿ ದೇಶದ ಆರ್ಥಿಕ ಭದ್ರತೆಗೆ ಹೆಚ್ಚು ಸಹಾಯವಾದೀತು ಎಂದು ತಿಳಿದು ಕೆಲವು ನಿಯಮಗಳನ್ನು ಮಾಡಿ ಆದನ್ನು ಕಾರ್ಯರೂಪಕ್ಕೆ ತರುವುದಕ್ಕೋಸ್ಕರವಾಗಿ ಈ ಮಸೂದೆಯನ್ನು ತಂದಿದೆ.

[MR. DEPUTY SPEAKER in the Chair.]

ಇಲ್ಲಿ ಸುಧಾರಿತ ಬೀಜ ಉಪಯೋಗಿಸುವುದು, ಎಲ್ಲೆಲ್ಲಿ ಯಾವ ಯಾವ ಬೀಜವನ್ನು ಉಪಯೋಗಿಸಬೇಕು, ಆ ಬೀಜವನ್ನು ಮಾರಾಟ ಮಾಡುವವರು ಸಹಿತ ಅಧಿಕೃತ ಮಾರಾಟಗಾರರಾಗಬೇಕು, ಜಿನ್ನಿಂಗ್ ಫ್ಯಾಕ್ಟರಿ ಮತ್ತು ಬೇರೆ ಫ್ಯಾಕ್ಟರಿಗಳಲ್ಲಿ ಆ ಪ್ರದೇಶದಲ್ಲಿ ಬೆಳೆಯುವ ಯಾವುದೇ ಹತ್ತಿಯನ್ನು ಬೇರೆ ಹತ್ತಿಯೊಂದಿಗೆ ವಿಶ್ರ ಮಾಡದೆ ಇರುವುದು, ಇದನ್ನೆಲ್ಲ ಕಾರ್ಯರೂಪಕ್ಕೆ ತರುವುದಕ್ಕಾಗಿ ಈ ಮಸೂದೆಯನ್ನು ಮಾನ್ಯಸಭೆಯ ಮುಂದೆ ತಂದಿದೆ. ಹಾಗೂ ಈ ಮಸೂದೆಯೊಳಗೆ ಸಾಮಾನ್ಯವಾಗಿ ಎರಡನೆ ನಿಯಮದ ಪ್ರಕಾರ ಕಂಟ್ರೋಲ್ಡ್ ಏರಿಯಾ, ಕಾಟನ್ ಲೈಸೆನ್ಸಿಂಗ್ ಬೋರ್ಡ್ ಇಂಥ